ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 16 ಏಪ್ರಿಲ್ 15, 1984 ಬೆಲೆ 60 ಪೈಸೆ

ಜಿಲ್ಲಾ ಪರಿಷತ್ ಮಸೂದೆಯ ಸದುಪಯೋಗವಾಗಲಿ

ಏಪ್ರಿಲ್ 12 ರಂದು ಮುಕ್ತಾಯಗೊಂಡ ವಿಧಾನ ಸಭೆ ಜನತಾ ಸರಕಾರ ಅತ್ಯಂತ ಮಹತ್ವಾಕಾಂಕ್ಷೆಯಿಂದ ರೂಪಿಸಿದ್ದ ಜಿಲ್ಲಾ ಪರಿಷತ್ ಮಸೂದೆಗೆ ಒಪ್ಪಿಗೆ ನೀಡಿತು. ವಿಧಾನ ಮಂಡಳದ ಎರಡೂ ಸದನಗಳಲ್ಲಿ ಕಳೆದ ವರ್ಷ ಆಗಸ್ಟ್ 11 ರಂದೇ ಈ ಮಸೂದೆ ಮಂಡಿಸಲ್ಪಟ್ಟು ಅದೇ ಅಧಿವೇಶನದಲ್ಲಿಯೇ ಅಂಗೀಕಾರವಾಗಬೇಕೆಂಬ ಇಚ್ಛೆಯನ್ನು ಜನತಾ ಪಕ್ಷ ಹೊಂದಿದ್ದರೂ ಕೂಡ, ಜಂಟೀ ಪರಿಶೀಲನಾ ಸಮಿತಿಯು ವರದಿಯನ್ನು ಅರ್ಪಿಸಲು ಕಾಂಗ್ರೆಸ್ ಪಕ್ಷದ ಅಸಹಕಾರದಿಂದ ತಡವಾದ ಕಾರಣ, ಕೆಲವು ತಿದ್ದುಪಡಿಗಳೊಂದಿಗೆ ಅದು ಮೊನ್ನಿನ ಅಧಿವೇಶನದಲ್ಲಿ ಮಂಜೂರಾತಿ ಪಡೆಯಿತು.

ಕೇಂದ್ರ ಮತ್ತು ರಾಜ್ಯಗಳ ಮಟ್ಟಕ್ಕಷ್ಟೇ ಸೀಮಿತಗೊಂಡಿದ್ದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಜಿಲ್ಲಾ ಮತ್ತು ಗ್ರಾಮ ಮಟ್ಟಕ್ಕೆ ವಿಸ್ತರಿಸುವ ಅಧಿಕಾರ ವಿಕೇಂದ್ರೀಕರಣದ ತತ್ವವನ್ನು ರೂಪಿಸುವುದರಲ್ಲಿ ನಮ್ಮ ಪಕ್ಷ ಪ್ರಧಾನ ಪಾತ್ರವಹಿಸಿದೆ. ಮೊತ್ತ ಮೊದಲು ಕೇರಳದಲ್ಲಿ ಅಧಿಕಾರಕ್ಕೆ ಬಂದ ದಿನದಿಂದ ಅಧಿಕಾರದ ವಿಕೇಂದ್ರೀಕರಣವನ್ನು ಭಾರತದ ಜನರ ಮುಂದಿಟ್ಟಿದ್ದೇವೆ. ಈ ಜಿಲ್ಲಾ ಪರಿಷತ್ ಮಸೂದೆಯ ಪ್ರೇರಕ ಶಕ್ತಿಯಾದ ಅಶೋಕ ಮೆಹತಾ ಸಮಿತಿಯ ವರದಿಯನ್ನು ರೂಪಿಸುವುದರಲ್ಲಿ ಇ. ಎಂ. ಎಸ್. ನಂಬೂದಿರಿಪಾಡ್ ಅವರು ಆ ಸಮಿತಿಯ ಸದಸ್ಯರಾಗಿ ಮುಖ್ಯ ಪಾತ್ರ ವಹಿಸಿದ್ದರು. ಆ ವರದಿಯ ಬಗ್ಗೆ ಅವರು ಬರೆದ ಟಿಪ್ಪಣಿ ಅಧಿಕಾರ ವಿಕೇಂದ್ರೀಕರಣದ ಗುರಿ, ಅವಶ್ಯಕತೆ, ಮತ್ತು ಇತಿಮಿತಿಗಳ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡುತ್ತದೆ. ಅಲ್ಲದೆ ದೇಶದ ಅನೇಕ ಆರ್ಥಿಕ ಮತ್ತು ರಾಜಕೀಯ ಶಾಸ್ತ್ರಜ್ಞರು ಮೆಚ್ಚಿರುವ ಆಳವಾಗಿ ಅರ್ಥೈಸಿರುವ ಪಶ್ಚಿಮ ಬಂಗಾಲದ ಪಂಚಾಯತ ರಾಜ್ಯ ವ್ಯವಸ್ಥೆ. ಈ ಸ್ಥಳೀಯ ಸಂಸ್ಥೆಗಳು ಶೋಷಿತ ಜನರ ಕೈದೀವಿಗೆಯಾಗಿ ಅವರ ಚಳುವಳಿಯ ವಿಸ್ತರಣೆಯ ಸಾಧನವಾಗಿ ಅವರ ಮೇಲೆ ಆಳುವ ವರ್ಗಗಳು ಮಾಡುವ ಧಾಳಿಯ ವಿರುದ್ಧ ರಕ್ಷಣೆಯಾಗಿ ಪರಿಣಮಿಸಿವೆಂಬುದಕ್ಕೆ ಮಾದರಿಯಾಗಿದೆ. ಗ್ರಾಮಾಂತರಗಳಲ್ಲಿ ಪಶ್ಚಿಮ ಬಂಗಾಲದ ಎಡರಂಗ ಸರಕಾರದ, ಮತ್ತು ಪಕ್ಷದ ಬಲವನ್ನು ವಿಸ್ತರಿಸುವಲ್ಲಿ ಮತ್ತು ದೃಢೀಕರಿಸುವಲ್ಲಿ ಮಹತ್ವದ ಪಾತ್ರವಾಗಿದೆ ಪ. ಬಂಗಾಲದ ಪಂಚಾಯತ ರಾಜ್ಯ ವ್ಯವಸ್ಥೆಯ ಯಶಸ್ಸು ಕೂಡ ನಮ್ಮ ಜಿಲ್ಲಾ ಪರಿಷತ್ ಮಸೂದೆಗೆ ಪ್ರೇರಣೆಗಳಲ್ಲೊಂದೆಂಬುದನ್ನು ಪಂಚಾಯತ್ ರಾಜ್ಯ ಸಚಿವರಾದ ಅಬ್ದುಲ್ ನಜೀರ ಸಾಬ್ ಒಪ್ಪಿಕೊಂಡಿದ್ದಾರೆ.

ಅಧಿಕಾರ ವಿಕೇಂದ್ರೀಕರಣವೆಂದರೆ ರಾಜ್ಯ ಕೇಂದ್ರದಲ್ಲಿರುವ ಅಧಿಕಾರವನ್ನು ಜಿಲ್ಲಾ ಮತ್ತು ಕೆಳಗಿನ ಹಂತಗಳಿಗೆ ವರ್ಗಾಯಿಸುವುದು ಮಾತ್ರವೇ ಅಲ್ಲ. ಬಂಡವಾಳ ಶಾಹಿ ಮತ್ತು ಭೂಮಾಲಕ ವರ್ಗಗಳು ತಮ್ಮ ಹಿತ ಸಾಧಿಸುವುದಕ್ಕಾಗಿ ನವದೆಹಲಿಯಲ್ಲಿ ದಿನೇ ದಿನೇ ಹೆಚ್ಚು ಹೆಚ್ಚು ಅಧಿಕಾರವನ್ನು ಕೇಂದ್ರೀಕರಿಸಿಕೊಳ್ಳುವುದರ ವಿರುದ್ಧದ ಹೋರಾಟದ ಒಂದು ಭಾಗವೆಂದೂ; ಅಧಿಕಾರದ ವಿಕೇಂದ್ರೀಕರಣ ಮಾತ್ರವಾದರೆ ಸಾಲದು, ಹಣ ಕಾಸಿನ ಸರಿಯಾದ ಹಂಚಿಕೆಯಾಗದೆ, ಅಧಿಕಾರಿಗಳನ್ನು ಚುನಾಯಿತ ಸಂಸ್ಥೆಗಳ ನಿಯಂತ್ರಣ ಕ್ಕೊಳಪಡಿಸದೆ ಅಧಿಕಾರ ವಿಕೇಂದ್ರೀಕರಣ ಫಲಕಾರಿಯಾಗಲಾರದೆಂದು ಸಿ. ಪಿ. ಐ. (ಎಂ) ಶಾಸಕ ರಾಮಚಂದ್ರ ರಾವ್ ಅವರು ವಿಧೇಯಕದ ಚರ್ಚೆಯಲ್ಲಿ ವ್ಯಕ್ತ ಮಾಡಿದ ಅಭಿಪ್ರಾಯ ಸೂಕ್ತವಾಗಿದೆ. ಆಳುವ ವರ್ಗದ ಹಿತಾಸಕ್ತಿಗಳು ಅಧಿಕಾರದ ಕೇಂದ್ರೀಕರಣದಲ್ಲಿಯೇ ಆಸಕ್ತರಾಗಿರುವಾಗ ಅಧಿಕಾರ ವಿಕೇಂದ್ರೀಕರಣಕ್ಕೆ ಪ್ರಬಲ ರಾಜಕೀಯ ಇಚ್ಛಾಶಕ್ತಿ ಅವಶ್ಯಕ. ಅಂಥ ಇಚ್ಛಾಶಕ್ತಿಯ ಪ್ರತೀಕ ಈ ಮಸೂದೆಯಾಗಿದೆ.

ಜಿಲ್ಲಾ ಪರಿಷತ್ ಮಸೂದೆಯನ್ನು ಸ್ವಾಗತ ಮಾಡುವಾಗಲೇ, ಅದರಲ್ಲಿರುವ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ನಾವು ಭಿನ್ನಮತ ವ್ಯಕ್ತಪಡಿಸಬೇಕಾಗುತ್ತದೆ. ಅವುಗಳಲ್ಲಿ ಪ್ರಮುಖವಾದುದು ಅಧಿಕಾರದ ವಿಕೇಂದ್ರೀಕರಣವೆಂದರೆ ಕೇವಲ ಅಭಿವೃದ್ಧಿ ಕಾರ್ಯಗಳ ನಿರ್ವಹಣೆಯನ್ನು ಸ್ಥಳೀಯ ಪಂಚಾಯತ ರಾಜ್ಯ ಸಂಸ್ಥೆಗಳಿಗೆ ವರ್ಗಾಯಿಸುವುದು ಎಂದು ತಿಳಿದಂತೆ ಕಂಡು ಬರುತ್ತದೆ. ಆದರೆ ಆಡಳಿತ ಮತ್ತು ನಿಯಂತ್ರಣ ಕಾರ್ಯವನ್ನು ವಿಕೇಂದ್ರಿಕರಿಸದೆ ಆಡಳಿತ ವಿಕೇಂದ್ರಿಕರಣವಾಗುವುದಿಲ್ಲ. (ಉದಾ ಭೂಸುಧಾರಣೆ, ಭೂ ಹಂಚಿಕೆ, ಕಾನೂನು ಸುವ್ಯವಸ್ಥೆಯ ಪಾಲನೆ, ಕೈಗಾರಿಕೆ ಇತ್ಯಾದಿ) ಚುನಾಯಿತ ಸಂಸ್ಥೆಗಳನ್ನು ಏಕಾ ಏಕಿ ವಜಾ ಮಾಡುವ ಅಂಶ ಮಸೂದೆಯಲ್ಲಿದೆ. ಚುನಾಯಿತ ಸಮಿತಿಗಳನ್ನು ವಜಾ ಮಾಡುವ ಅಧಿಕಾರ ಸರಕಾರಕ್ಕಿರಬಾರದು.

ಕಾಂಗ್ರೆಸ್ ಪಕ್ಷ ಜಿಲ್ಲಾ ಪರಿಷತ್ತನ್ನು ಒಪ್ಪಿಕೊಂಡರೂ, ಮಂಡಳ ಪಂಚಾಯಿತ್ತಿ, ನ್ಯಾಯ ಪಂಚಾಯತಿಗಳಿಗೆ ಹಾಗೆಯೇ ತಾಲ್ಲೂಕು ಅಭಿವೃದ್ಧಿ ಮಂಡಲಗಳನ್ನು ತೆಗೆಯುವುದಕ್ಕೆ ಪ್ರಬಲ ವಿರೋಧ ವ್ಯಕ್ತ ಪಡಿಸಿದರು. ಮಸೂದೆಯ ಇಡೀ ಅಧ್ಯಾಯಗಳನ್ನೇ ಬದಲಿಸಿ ಹೊಸ ಅಧ್ಯಾಯ ಸೇರಿಸುವ ತಿದ್ದುಪಡಿಗಳನ್ನು ಸೂಚಿಸಿದರು. ಇವರ ಪರಿಣಾಮವಾಗಿ ಜಂಟಿ ಪರಿಶೀಲನಾ ಸಮಿತಿಯಲ್ಲಿಯೇ ತಾಲ್ಲೂಕ್ ಅಭಿವೃದ್ಧಿ ಮಂಡಳಿಗಳ ಸ್ಥಾನದಲ್ಲಿ ಉಸ್ತುವಾರಿ ಸಮಿತಿಯಾಗಿ ತಾಲ್ಲೂಕ್ ಪಂಚಾಯತಿ ಸಮಿತಿ ಸೇರ್ಪಡೆಯಾದರೆ, ಮಂಡಲ ಪಂಚಾಯತಿಯ ವಿಸ್ತೀರ್ಣ 20,000 ಜನ ಸಂಖ್ಯೆಯಿಂದ, 10 ಸಾವಿರಕ್ಕೆ (ಮಲೆನಾಡು ಜಿಲ್ಲೆಗಳಲ್ಲಿ 5000) ಇಳಿಯಿತು. ವಿಧಾನ ಸಭೆಯಲ್ಲಿ ನ್ಯಾಯ ಪಂಚಾಯತಿ ಕಾನೂನು ಜಾರಿ ಗೊಳಿಸುವ ಅವಧಿ ಮೂರು ವರ್ಷ ಮುಂದಕ್ಕೆ ಹೋದರೆ ವಿಧಾನ ಪರಿಷತ್ತಿನಲ್ಲಿ ಐದು ವರ್ಷ ಮುಂದಕ್ಕೆ ಹೋಯಿತು.

(8ನೇ ಪುಟ ನೋಡಿ)

ಕಾ. ಸೂರಿಯವರ ಆಮರಣ ಉಪವಾಸ ಮುಕ್ತಾಯ

ಜನತಾ ಸರಕಾರ 25 ಕೈಗಾರಿಕೆಗಳಿಗಾಗಿ ನೇಮಿಸಿರುವ ಕನಿಷ್ಠ ವೇತನ ಸಮಿತಿಗಳು ತಮ್ಮ ಶಿಫಾರಸುಗಳನ್ನು ಈಗಾಗಲೇ ಸರಕಾರಕ್ಕೆ ಸಲ್ಲಿಸಿ ಹಲವು ದಿವಸಗಳಾಗಿದ್ದರೂ ಕೂಡ ಅವುಗಳನ್ನು ಪ್ರಕಟಿಸಿ, ಕಮಿಟಿಯ ಶಿಫಾರಸಿನಂತೆ ಹೆಚ್ಚಿನ ಸಂಬಳ ಮತ್ತು ತುಟ್ಟಿಭತ್ತೆಯ ಲಾಭ ಲಕ್ಷಾವಧಿ ಸಂಘಟಿತ–ಅಸಂಘಟಿತ ಕಾರ್ಮಿಕರಿಗೆ ನಿರಾಕರಿಸುತ್ತಿರುವ ಸರಕಾರದ ನೀತಿಯ ವಿರುದ್ಧ ಪ್ರತಿಭಟನೆ ಮಾಡಿ, ಹೆಚ್ಚುವರಿ ದಿನ ಗೂಲಿಯ ಲಾಭ ಕಾರ್ಮಿಕರಿಗೆ ಕೂಡಲೇ ಲಭ್ಯವಾಗಬೇಕೆಂದು ಒತ್ತಾಯಿಸಲು ರಾಜ್ಯ ಸಿಐಟಿಯು ಅಧ್ಯಕ್ಷರೂ, ಸಿಪಿಐ (ಎಂ) ಶಾಸಕರೂ ಆದ ಕಾ ಸೂರ್ಯನಾರಾಯಣರಾವ್ ಅವರು ಏಪ್ರಿಲ್ 9 ರಿಂದ ವಿಧಾನ ಸೌಧದ ಮುಂದೆ ಆಮರಣ ಉಪವಾಸ ಕೈಗೊಂಡಿದ್ದರು. ಏಪ್ರಿಲ್ 12 ರಂದು ಸಿಪಿಐ (ಎಂ) ಶಾಸಕರಾದ ಪಿ. ರಾಮಚಂದ್ರ ರಾವ್ ಶಾಸನ ಸಭೆಯಲ್ಲಿ ಗಮನ ಸೆಳೆಯುವ ಪ್ರಶ್ನೆ ಎತ್ತಿದಾಗ, ಎಲ್ಲ ಪಕ್ಷಗಳ ಪ್ರತಿನಿಧಿಗಳೂ ಕಾನೂನು ಇಲಾಖೆಯು ಕನಿಷ್ಠ ವೇತನಗಳ ಕುರಿತು ಆಜ್ಞೆ ಹೊರಡಿಸಲಿಕ್ಕೆ ವಿಳಂಬ ಮಾಡುತ್ತಿರುವುದನ್ನು ಟೀಕಿಸಿದರು. ಕಾರ್ಮಿಕ ಸಚಿವ ಅಜೀಜ್‌ಶೇಠ್ ಅವರು ಕನಿಷ್ಠ ಕೂಲಿಯನ್ನು ಆದಷ್ಟು ತೀವ್ರ ಜ್ಯಾರಿಯಲ್ಲಿ ತರಲಾಗುವುದೆಂದು ಆಶ್ವಾಸನೆಯಿತ್ತರು.

ಸಾಯಂಕಾಲ ನಗರಾಭಿವೃದ್ಧಿ ಸಚಿವ ಚಂದ್ರಶೇಖರ್, ಜನತಾ ಶಾಸಕ ರಾಮದೇವ್, ಸಿಪಿಐ ಶಾಸಕ ಎಂ.ಎಸ್. ಕೃಷ್ಣನ್, ಸಿಪಿಐ(ಎಂ) ಶಾಸಕರಾದ ರಾಮಚಂದ್ರರಾವ್ ಮತ್ತು ಅಪ್ಪಸ್ವಾಮಿರೆಡ್ಡಿ, ಸಿಐಟಿಯು ಉಪಾಧ್ಯಕ್ಷರಾದ ಎನ್. ಕೆ. ಉಪಾಧ್ಯಾಯರೆಲ್ಲ ಸೂರ್ಯನಾರಾಯಣರಾವ ತಮ್ಮ ಉಪವಾಸ ಸತ್ಯಾಗ್ರಹದ ಮುಖ್ಯ ಉದ್ದೇಶ ಸರಕಾರದ ಗಮನ ಸೆಳೆದು ಕೂಡಲೆ ಪರಿಹಾರ ಒದಗಿಸುವುದಾಗಿರುವುದರಿಂದ, ಆ ಉದ್ದೇಶ ಸಫಲವಾಗಿರುವುದರಿಂದ ಉಪವಾಸ ಬಿಡಬೇಕೆಂದು ಕೇಳಿಕೊಂಡರು. ಮಂತ್ರಿ ಚಂದ್ರಶೇಖರವರು ಎಳೆನೀರು ಕುಡಿಸಿ ಉಪವಾಸ ಮುಕ್ತಾಯಗೊಳಿಸಿದರು. ಸಂಘಟಿತ–ಅಸಂಘಟಿತ ಕಾರ್ಮಿಕರ ಸಲುವಾಗಿ ಸತತ ಹೋರಾಟ ನಡೆಸುತ್ತ ಬಂದ ಸಿಐಟಿಯು ಜನತಾ ಸರಕಾರದಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಹೋರಾಟ ಮುಂದುವರಿಸಿ ಕಾರ್ಮಿಕರಿಗೆ ಕನಿಷ್ಠ ವೇತನದ ಲಾಭ ಕೊಡಿಸಲು ಹೋರಾಟವನ್ನು ಇನ್ನೂ ತೀವ್ರ ಗೊಳಿಸಲು ನಿರ್ಧರಿಸಿದೆ.

ರೈತರಿಗೆ ಬೆಳೆ ವಿಮಾ ಯೋಜನೆ

ರುದ್ರಪ್ಪನವರ ಅಧ್ಯಕ್ಷತೆಯಲ್ಲಿರುವದೊಂದೇ ಏಕೈಕ ಪ್ರಾತಿನಿಧಿಕ ರೈತ ಸಂಘವೆಂದು ತಿಳಿದಿದ್ದ ಹೆಗಡೆ ಸರಕಾರ ಭ್ರಮನಿರಸನೆಯಾಗಿ ಏಪ್ರಿಲ್ 6 ರಂದು ರಾಜ್ಯದಲ್ಲಿರುವ ಎಲ್ಲಾ ರೈತ ಸಂಘದ ಪ್ರತಿನಿಧಿಗಳನ್ನೂ ಕರೆಸಿ ಸುದೀರ್ಘ ಚರ್ಚೆ ಮಾಡಿ ರೈತರು ಎದುರಿಸುತ್ತಿರುವ ಸಮಸ್ಯೆಗಳಿಗೆ ತಕಾಲಿಕ ಪರಿಹಾರ ಒದಗಿಸುವ ಸಲುವಾಗಿ ರೈತ ಸಂಘದ ಪ್ರತಿನಿಧಿಗಳನ್ನೊಳಗೊಂಡ ಒಂದು ಸ್ಥಾಯಿ ಸಮಿತಿಯನ್ನು ರಚಿಸಲು ಒಪ್ಪಿಕೊಂಡಿದೆ.

ಸಭೆಯಲ್ಲಿ ಮಾತನಾಡಿದ ಕೃಷಿ ಮಂತ್ರಿ ದೇವೇಗೌಡರು, ಕರ್ನಾಟಕ ಪ್ರಾಂತ ರೈತ ಸಂಘದ ಬೇಡಿಕೆಗಳಲ್ಲೊಂದಾದ ಬೆಳೆ ವಿಮಾ ಯೋಜನೆಯನ್ನೊಪ್ಪಿಕೊಂಡು, ಸಣ್ಣ ರೈತರಿಗಾಗಿ ಅಂಥ ಯೋಜನೆ ರೂಪಿಸುವುದಾಗಿಯೂ ಹೇಳಿದರು. ಎಲ್ಲ ರೈತ ಸಂಘಗಳು ಮುಂದಿಟ್ಟಿರುವ ತುಂಡು ಭೂಮಿ ಕಾಯಿದೆಯನ್ನು ರದ್ದುಗೊಳಿಸುವ ಬಗ್ಗೆ ಮುಖ್ಯಮಂತ್ರಿಗಳ ಪರವಾಗಿ ಮಾತನಾಡಿದ ಸಚಿವ ಬೊಮ್ಮಾಯಿಯವರು ಈ ಬೇಡಿಕೆಯನ್ನು ಒಪ್ಪಿಕೊಳ್ಳಲಾಗುವುದೆಂದು ಸಾರಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಪರವಾಗಿ ಅಧ್ಯಕ್ಷ ಪಿ. ರಾಮಚಂದ್ರರಾವ್, ಪ್ರ. ಕಾರ್ಯದರ್ಶಿ ಹಳಕಟ್ಟಿ, ಉಪಾಧ್ಯಕ್ಷ ಭೀಮಸಿ ಕಲಾದಗಿ, ಕಾರ್ಯದರ್ಶಿಗಳಾದ ಜಗನ್ನಾಥ ಮತ್ತು ಚಂದ್ರಶೇಖರ ಚಾಳಿಯವರು ಸಭೆಯಲ್ಲಿ ಭಾಗವಹಿಸಿದ್ದರು. ಪ್ರಾಂತ ರೈತ ಸಂಘದ ಪರವಾಗಿ ವಿ. ಎನ್. ಹಳಕಟ್ಟಿಯವರು ಮಾತನಾಡುತ್ತ ರಾಜ್ಯ ಮಟ್ಟದಲ್ಲೂ, ಜಿಲ್ಲಾ ಮಟ್ಟಗಳಲ್ಲೂ ಸ್ಥಾಯಿ ಸಮಿತಿಗಳನ್ನು ರಚಿಸಿ, ರೈತ ಸಂಘದ ಪ್ರತಿನಿಧಿಗಳೊಡನೆ ಜಿಲ್ಲಾಧಿಕಾರಿಗಳು ಚರ್ಚಿಸಿ ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತಾಗಬೇಕೆಂದೂ ಹೇಳಿ, ಜನತಾ ಸರಕಾರ ಕೆಲವು ಮೂಲಭೂತ ಪ್ರಶ್ನೆಗಳ ಬಗ್ಗೆ ಸ್ಪಷ್ಟ ದೃಢ ನಿಲುವು ತೆಗೆದು

(8ನೇ ಪುಟ ನೋಡಿ)

— ಎನ್ಕೆ

ಕರ್ನಾಟಕ ರಾಜ್ಯದಲ್ಲಿ

ಆತ್ಮ ನಿರೀಕ್ಷೆಯ ಅಗತ್ಯ ಕಂಡುಬರುತ್ತಿದೆಯಂತೆ !

"ರಾಜ್ಯ ಸಭೆಗೆ ರಾಜ್ಯ ವಿಧಾನ ಸಭೆಯಿಂದ ನಡೆದ ಮತಚಲಾವಣೆ ಗಮನಿಸಿದರೆ ಆತ್ಮನಿರೀಕ್ಷೆ ಮಾಡಿಕೊಳ್ಳಬೇಕಾದ ಅಗತ್ಯ ಉಂಟಾಗಿದೆಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ. ಎಚ್. ಪಾಟೀಲರು ಹೇಳಿದ್ದಾರೆ" ಪಕ್ಷವನ್ನು ಸರಿಯಾದ ದಾರಿಯಲ್ಲಿ ಶಕ್ತಿಯುತವಾಗಿ ಕಟ್ಟಲು ಕೆಲವು ಪಾಠಗಳನ್ನು ಕಲಿಯಬೇಕಾದ ಅಗತ್ಯವನ್ನೂ ನಿನ್ನೆಯ ಚುನಾವಣೆ ಸಾಬೀತು ಪಡಿಸಿದೆಯೆಂದು ತನ್ನ ಪಕ್ಷದಲ್ಲಿಯ ಶಾಸಕರು ಹಣಕ್ಕೂ ಜಾತಿಗೂ ಮತ ಮಾರಿಕೊಳ್ಳುವ ಪ್ರವೃತ್ತಿ ಕುರಿತು ಪಾಟೀಲರ ಪ್ರತಿಕ್ರಿಯೆ ಎಲ್ಲ ಕಾಂಗ್ರೆಸ್ ಮುಖಂಡರ "ರಿವಾಜ"ನ್ನೆ ಪ್ರತಿ ಬಿಂಬಿಸುತ್ತಿದೆ.

ಬೆಂಗಳೂರಿನಲ್ಲಿ ಪಾಟೀಲರಿಗುಂಟಾದ ಚಿಂತೆ ದಿಲ್ಲಿಯಲ್ಲಿ ರಾಷ್ಟ್ರೀಯ ಮುಖಂಡರನ್ನು ಆವರಿಸಿದೆ.

ರಾಜ್ಯ ಸಭೆಯಲ್ಲಿ ಎರಡು ಮೂರಾಂಶ ಬಹುಮತಗಳಿಸಿ, ದೇಶದ ರಾಜಕೀಯದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನುಂಟು ಮಾಡಲು ಹೊರಟಿರುವ ಇಂದಿರಾ ಗುಂಪಿಗೆ 6 ರಾಜ್ಯಗಳಲ್ಲಿ ಕಾಂಗ್ರೆ ಶಾಸಕರು ವಿರೋಧ ಪಕ್ಷಕ್ಕೆ ಮತ ನೀಡಿರುವುದು ಚಿಂತೆಗವಕಾಶ ಮಾಡಿ ಕೊಟ್ಟಿದೆಯಂತೆ. ಕಾಂಗ್ರೆಯ ಕಾರ್ಯವಾಹಕ ಅಧ್ಯಕ್ಷ ರಾಗಿರುವ ಕಮಲಾ ಪತಿ ತ್ರಿಪಾಟಿಯವರು "ಈ ತರದ ಅಶಿಸನ್ನು ಸಹಿಸಲು ಶಕ್ಯವಿಲ್ಲ"ವೆಂದು ಹೇಳಿದ್ದಾರೆ. ಹಲವಾರು ಹಿರಿಯ ಮುಖಂಡರೂ ಇಂಥದ್ದೇ ಪ್ರತಿಕ್ರಿಯೆಯನ್ನ ವ್ಯಕ್ತ ಮಾಡಿದ್ದಾರೆ. ಯಾಕಂದರೆ, ಕೇಂದ್ರದ ಮಂತ್ರಿಗಳನ್ನೊಳಗೊಂಡು ಹಿರಿಯ ಮುಖಂಡರನ್ನು ಪ್ರತಿ ರಾಜ್ಯಕ್ಕೂ ವೀಕ್ಷಕರನ್ನಾಗಿಯೂ ಮಾರ್ಗ ದರ್ಶಕರನ್ನಾಗಿಯೂ ಕಳುಹಿಸಿ ಕೊಡಲಾಗಿತ್ತು. ಪ್ರಣಬ್ ಮುಖರ್ಜಿ ಯಲ್ಲದೆ ಶಾಲಿನಿ ತಾಯಿಯಂಥವರೆಲ್ಲ ಬೆಂಗಳೂರಿನಲ್ಲಿ ಒಂದು ವಾರ ಕ್ಯಾಂಪ್ ಮಾಡಿದ್ದರು. ತವಗೆ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮತಗಿಟ್ಟಿಸಲು ಸಾಧ್ಯವಾಗಲಿಲ್ಲ ಅಷ್ಟೇ ಅಲ್ಲ ತಮ್ಮ ಪಕ್ಷದ ಮೂವರು ಕೈ ಕೊಟ್ಟು ಜನತಾ ಅಭ್ಯರ್ಥಿ ಆರಿಸಿ ಬರಲು ಸಹಾಯ ಮಾಡಿದರು. ಕರ್ನಾಟಕ ಗುಜರಾತ್‌ಗಳಲ್ಲಿ ಕಾಂಗ್ರೆ ಮುಖಂಡತ್ವ ಶಿಸ್ತಿನಿಂದ ಕೆಲಸ ಮಾಡಿದ್ದರೆ ಒಂದೊಂದು ಸ್ಥಾನಜಾಸ್ತಿ ಪಡೆಯಬಹುದಾಗಿತ್ತೆಂದು ಕಾಂಗ್ರೆ ಊಹೆ.

ಕರ್ನಾಟಕದಲ್ಲಿ 3, ತಮಿಳುನಾಡಿನಲ್ಲಿ 4, ಮಹಾರಾಷ್ಟ್ರದಲ್ಲಿ 6, ಹರ್ಯಾಣದಲ್ಲಿ 3, ಹಾಗೆಯೇ ಇನ್ನೂ 2 ರಾಜ್ಯಗಳಲ್ಲಿ ಪಕ್ಷಾಂತರವಾಗಿ ಕಾಂಗ್ರೆಸ್ಸಿಗೆ ನಷ್ಟವಾಗಿದೆ.

ಈ ರೀತಿಯ ಪಕ್ಷಾಂತರ ಇದೇನೂ ಪ್ರಥಮ ಬಾರಿಯಲ್ಲ. ಈ ಹಿಂದೆ ಕೂಡ ಇದೇ ರೀತಿ ಆಗಿತ್ತು. ಆವಾಗ ಕೂಡ ಇದೇ ರೀತಿಯ ಚಿಂತನೆ ವ್ಯಕ್ತ ಮಾಡಲಾಗಿತ್ತು, ಶಿಸ್ತು ಭಂಗ ಕ್ರಮವನ್ನೂ ತೆಗೆದುಕೊಳ್ಳಲಾಗಿತ್ತು. ಆದರದು ಯಾವ ಪರಿಣಾಮವನ್ನೂ ಬೀರಿರಲಿಲ್ಲ. ಮಹಾರಾಷ್ಟ್ರದಲ್ಲಿ ಪ್ರಭಾವಿತ ಅಂತುಳೆಯವರಂತೆಯೇ ಪ್ರತಿಯೊಂದು ರಾಜ್ಯದಲ್ಲಿಯೂ, ಇಂದಿರಾ ಗಾಂಧಿಗೆ ರಕ್ತದಾನ ಮಾಡುವ "ಸೂಪರ್ ಲೀಡರು"ಗಳು ಇರುವಾಗ ಈ ರೀತಿಯ ಪಕ್ಷಾಂತರದ ಮತದಾನ 'ಮಾಮೂಲಿ' ಎಂದು ಎಲ್ಲರಿಗೂ ಗೊತ್ತು.

ಆತ್ಮ ನಿರೀಕ್ಷೆಯ ಮಾತಾಡುವ ಕೆ. ಎಚ್. ಪಾಟೀಲರು 1969 ರಲ್ಲಿ ಇಂದಿರಾ ಕಾಂಗ್ರೆಸ್ ಬಿಟ್ಟು ಸಂಸ್ಥಾ ಕಾಂಗ್ರೆಸ್ ಆದರು. ಕೆಲವುವರ್ಷ ಅದರ ಅಧ್ಯಕ್ಷರಾಗಿದ್ದು, ಇತ್ತೀಚೆಗೆ ಇಂದಿರಾ ಗಾಂಧಿಯವರಿಂದ ಕರ್ನಾಟಕ ರಾಜ್ಯದ ಅಧ್ಯಕ್ಷಸ್ಥಾನ ಪಡೆದು ತಮ್ಮ ಶಾಸಕರ ಹಿಡಿತ ಬಿಗಿಗೊಳಿಸುವಲ್ಲಿ ವಿಫಲರಾದ ನಂತರ ಆತ್ಮ ನಿರೀಕ್ಷಣೆಯ ವಿಚಾರ ಹೊರ ಹೊಮ್ಮಿದ್ದಾರೆ.

ಗದಗಿನ ಹತ್ತಿರ ಕುರ್ತ ಕೋಟಿಯಲ್ಲಿ ಕೋಟ್ಯಾವಧಿ ರೂಪಾಯಿ ಬಂಡವಾಳದಿಂದ ಸಹಕಾರಿ ನೂಲಿನ ಗಿರಣಿ, ಎಣ್ಣೆ ಗಿರಣಿ, ಪಾಲಿಟೆಕ್ನಿಕ್ ಹಾಗೆಯೇ ಹಲವಾರು ಕೈಗಾರಿಕೆಗಳ ಚೋಟಾ ಭಿಲಾರ್ ಆಗಿ ಮೆರೆಯುತ್ತಿರುವ ಪಾಟೀಲರ ಸಾಮ್ರಾಜ್ಯದಲ್ಲಿ ಕಾರ್ಮಿಕರಿಗೆ ಸಂಘ ಕಟ್ಟುವ, ಸರಕಾರಿ ಸಮಿತಿಗಳು ಶಿಫಾರಸು ಮಾಡುವ ಕನಿಷ್ಟ ವೇತನ ಪಡೆಯುವ ಅವಕಾಶವನ್ನೂ ಒದಗಿಸದ ಈ ಮಹಾಶಯ ಆತ್ಮನಿರೀಕ್ಷಣೆಯ ಸೋಗು ತೆಗೆದಿರುವುದು ಆಶ್ಚರ್ಯಕರ, ತಾವು ಆತ್ಮ ನಿರೀಕ್ಷಣೆ ಮಾಡುತ್ತಿರುವಾಗ, ಇಂದಿರಾ ಗಾಂಧಿ ತನ್ನ ಅಧ್ಯಕ್ಷ ಪದದ ಕುರಿತೂ ಕೂಡ ಆತ್ಮ ನಿರೀಕ್ಷಣೆ ಮಾಡುತಿದ್ದಾರೆಂದೂ ಪಾಟೀಲರಿಗೆ ತಿಳಿದಿರಬೇಕು. ಬಂಡವಾಳ ಶಾಹಿ ಪಕ್ಷಗಳಲ್ಲಿ ಈ ರೀತಿಯ ನಿರೀಕ್ಷಣೆಗಳು ಹೊಸತೇನಲ್ಲ.

ಜನತಾ ಮಂತ್ರಿಯವರಿಂದಲೂ ಇಂದಿರಾ ರಾಗವೇ ?

ಜನತಾ ಮಂತ್ರಿ ಎಸ್. ಆರ್. ಬೊಮ್ಮಾಯಿ ಅವರ ಬಾಯಿಯಿಂದಲೂ ಇಂದಿರಾ ರಾಗವೇ ಹೊರಡುತ್ತಿರುವುದು ಆಶ್ಚರ್ಯಕರ. ಅದು ನಮಗಾರಿಗೂ ಸಲ್ಲದು. ಜನತಾ ಮಂತ್ರಿಗಳೆಲ್ಲಾ ಆ ರೀತಿ ಹಾಡುವುದನ್ನು ಬಿಟ್ಟುಬಿಡಲೇ ಬೇಕು.

ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಯನ್ನು ದಿಲ್ಲಿಯ ಉಕ್ಕಿನ ಪ್ರಾಧಿಕಾರಕ್ಕೆ ಒಪ್ಪಿಸುವ ನಿರ್ಣಯ ಕೈ ಗೊಳ್ಳಲಾಗಿದೆಂದೂ, ಭದ್ರಾವತಿ ಉಕ್ಕಿನ ಕಾರ್ಖಾನೆ ಅನುಭವಿಸುತ್ತಿರುವ ಅಪಾರ ನಷ್ಟ ಹೊಸದೇನಲ್ಲವೆಂದೂ, ಉಕ್ಕಿನ ಪ್ರಾಧಿಕಾರವೂ ಅಪಾರ ನಷ್ಟ ಅನುಭವಿಸುತ್ತಿದೆಂದೂ ಬೊಮ್ಮಾಯಿಯವರು ವಿಧಾನ ಪರಿಷತ್ತಿನಲ್ಲಿ ಹೇಳಿದರು.

ಒಂದೇ ವರ್ಷದಲ್ಲಿ ಟಾಟಾ ರೂ. 590 ಕೋಟಿ, ಬಿರ್ಲಾ ರೂ. 313 ಹೀಗೆಯೇ ಇತರ ಗುತ್ತೇದಾರಿ ಬಂಡವಳದಾರಿ ಕಾರ್ಖಾನೆ ಮಾಲಕರು ಕೋಟ್ಯಾವಧಿ ರೂಪಾಯಿ ಲಾಭಗಳಿಸಿರುವಾಗ, ಲಾಭ ಗಳಿಕೆಯ ಕ್ರಮ ಇದೇ ರೀತಿ ಮುಂದುವರಿಯುತ್ತಿರುವಾಗ ರಾಜ್ಯ ಮತ್ತು ಕೇಂದ್ರ ಸರಕಾರಗಳ ಅಧೀನದಲ್ಲಿರುವ ಉದ್ಯಮಗಳು ಹಾನಿಯಲ್ಲೇ ಮುಳುಗಿರುವುದು ಸರಕಾರದ ಕಾರ್ಯ ವೈಫಲ್ಯದ ಮೇಲೆ ಬೆಳಕು ಚೆಲ್ಲುತ್ತಿದೆ.

ಕೇಂದ್ರ-ರಾಜ್ಯಗಳಲ್ಲಿ ಕೈಗಾರಿಕೆಗಳ ರಾಷ್ಟ್ರೀಕರಣಕ್ಕೆ ವಿರೋಧಿಯಾಗಿರುವ ಗುಂಪು ಬಲಿಷ್ಟವಾಗಿದೆ. ಅಧಿಕಾರಿ ವರ್ಗದಲ್ಲಿಯೂ ಗುತ್ತೇದಾರಿಗಳ ಹಿತೈಷಿಗಳದ್ದೇ ಪ್ರಾಬಲ್ಯ. ಇಂಥ ಪರಿಸ್ಥಿತಿಯಲ್ಲಿ ಕೈಗಾರಿಕೆಗಳ, ಕಾರ್ಪೊರೇಶನ್‌ಗಳ ಅಧ್ಯಕ್ಷರಾಗಿ ಆಡಳಿತೆಗಾರರಾಗಿ ಕಾರ್ಯ ನಿರ್ವಹಿಸಲು ಪ್ರಾಮಾಣಿಕ, ಧ್ಯೇಯ, ಧೋರಣೆಗಳಿಗೆ ಅಂಟಿಕೊಂಡ ಮುಖಂಡರೂ-ಅಧಿಕಾರಿಗಳೂ ಅಗತ್ಯ. ಎಡ ಪಕ್ಷಗಳಲ್ಲಿ ಅಂಥವರ ಲಭ್ಯತೆಯಿಂದಾಗಿ ಕೈಗಾರಿಕೋದ್ಯಮ ರಂಗದಲ್ಲಿ ಆಡಳಿತೆ ಚುರುಕುಗೊಳಿಸಿ ಖಾಸಗಿ ಕೈಗಾರಿಕೋದ್ಯಮಿಗಳ ಕೂಡ ಪೈಪೋಟಿ ನಡೆಸಲು, ಸಹಕಾರಿ-ಸರಕಾರ ಕ್ಷೇತ್ರ ಖಾಸಗಿ ಕ್ಷೇತ್ರಕ್ಕಿಂತ ಉತ್ತಮವೆಂದು ತೋರಿಸಿ ಕೊಡಲು ಪಶ್ಚಿಮ ಬಂಗಾಲದಲ್ಲಿ ಸಾಧ್ಯವಾಗಿದೆ. ರಶ್ಯದಲ್ಲಿ ಕ್ರಾಂತಿಯನಂತರ 1920 ರಿಂದ 1923 ರ ವರೆಗೆ ಹೊಸ ಆರ್ಥಿಕ ನೀತಿಯನ್ನು ಲೆನಿನ್ನರು ಕಾರ್ಯರೂಪದಲ್ಲಿ ತಂದಾಗ ಸಹಕಾರಿ-ಸರಕಾರಿ ಕ್ಷೇತ್ರ ಖಾಸಗಿ ಕ್ಷೇತ್ರಕ್ಕಿಂತ ಉತ್ತಮ ಸೇವೆ ಸಲ್ಲಿಸಿ ರಾಷ್ಟ್ರೀಕರಣದ ಅಗತ್ಯವನ್ನು ಜನರಿಗೆ ಮನದಟ್ಟು ಮಾಡಿಕೊಡಬೇಕೆಂದು ಆದೇಶ ನೀಡಿದ್ದರು. ಆ ಸಾಧನೆಯಿಂದಾಗಿಯೇ ಕಾರ್ಖಾನೆ-ಭೂಮಿಗಳಂಥ ಉತ್ಪಾದನಾ ಸಾಧನಗಳನ್ನೆಲ್ಲ ರಾಷ್ಟ್ರೀಕರಣ ಮಾಡಿ ಉತ್ಪಾದನೆಯನ್ನು ಸಮಾಜೀಕರಣ ಗೊಳಿಸಿ ಸಮತಾವಾದ ಭದ್ರ ಪಡಿಸಲು, ಬಂಡವಳಶಾಹಿ ಆರ್ಥಿಕ-ಉತ್ಪಾದನ ನೀತಿಗಿಂತ ಸಮತಾವಾದಿ ನೀತಿ ಉತ್ತಮವೆಂದು ತೋರಿಸಲು ಸಾಧ್ಯವಾಯಿತು.

ಬಂಡವಾಳ ಶಾಹಿ ಮೂಲ ವರ್ಗದ ನೀತಿಯನ್ನೇ ಅನುಸರಿಸುತ್ತಿರುವ ಜನತಾ ಪಕ್ಷದ ಸರಕಾರದಿಂದ ಎಡ ಪಕ್ಷಗಳ ದಾರಿ ಹಿಡಿಯಲು ಸಾಧ್ಯವಿಲ್ಲ. ನಾವೂ ಅಂಥ ಕ್ರಾಂತಿಕಾರಿ ಬದಲಾವಣೆಯನ್ನೂ ಅಪೇಕ್ಷಿಸುವುದಿಲ್ಲ. ಆದರೆ ತಾವು ಭದ್ರವಾಗುಳಿಯ ಬೇಕಾದರೆ, ಎಡ ಪಕ್ಷಗಳ ಸಾರ್ವಜನಿಕರ ಬೆಂಬಲ ಪಡೆಯ ಬೇಕಾದರೆ, ಆಡಳಿತೆಯಲ್ಲಿ ಹೆಚ್ಚಿನ ಸುಧಾರಣೆಯಾಗುವಂತೆ ಶ್ರಮಿಸಲೇ ಬೇಕಾಗುತ್ತದೆ. ಕೇಂದ್ರ ನಡೆಸುವ ಉದ್ಯಮಗಳು ನಷ್ಟಕ್ಕೊಳಗಾಗುತ್ತಿವೆಂದು ಹೇಳುವುದರಿಂದ ಪ್ರಯೋಜನವಿಲ್ಲ. ಭದ್ರಾವತಿಯ ಹಾಗೆಯೇ ರಾಜ್ಯ ಸರಕಾರದ ಅಧೀನದಲ್ಲಿರುವ ಕಾರ್ಖಾನೆಗಳ ಆಡಳಿತೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು, ಅವು ಲಾಭಗಳಿಸುವಂತೆ ಮಾಡಲು ಎಲ್ಲ ಪ್ರಯತ್ನಗಳನ್ನು ಕೈಗಾರಿಕ ಮಂತ್ರಿ ಬೊಮ್ಮಾಯಿಯವರು ಕೈ ಗೊಳ್ಳುವುದು ಅತ್ಯಗತ್ಯ.

ಲೋಕೋಪಯೋಗಿ ಶಾಖೆಯ ವಿಭಜನೆ

ಲೋಕೋಪಯೋಗಿ ಶಾಖೆಯನ್ನು ವಿಭಜಿಸಿ ಸಣ್ಣ ನೀರಾವರಿಗೆ ಪ್ರತ್ಯೇಕ ಇಲಾಖೆ ರಚಿಸಲಾಗುವುದೆಂಬ ದೇವೇಗೌಡರ ಹೇಳಿಕೆ ಸ್ವಾಗತಾರ್ಹ. ಕರ್ನಾಟಕದಲ್ಲಿ ನೀರಾವರಿಗೆ ಪ್ರಧಾನ ಪಾತ್ರವಿದ್ದು ದೊಡ್ಡ ಮತ್ತು ಸಣ್ಣ ನೀರಾವರಿಗಳೆರಡೂನ್ನ ಒಂದೇ ಇಲಾಖೆಗೆ ಸೇರಿಸುವುದಾಗಲೀ, ಲೋಕೋಪಯೋಗಿ ಇಲಾಖೆಯಲ್ಲೇ ಉಳಿಸುವುದಾಗಲೀ ಸಮಂಜಸವಲ್ಲೆಂಬ ಸಂಗತಿ ಇತ್ತೀಚಿನ ಅನುಭವಗಳಿಂದ ಕಂಡು ಬಂದಿದೆ. ಬಂಡವಾಳಶಾಹಿ ಆಡಳಿತ ಪದ್ಧತಿಯಲ್ಲಿ ಸಣ್ಣ ಒಂದು ಕೆಲಸ ಕೂಡ ಹಲವಾರು ಖಾತೆಗಳಲ್ಲಿ ಸಂಚರಿಸಬೇಕಾಗುತ್ತದೆ. ಇದರಿಂದ ಕಾರ್ಯ ವಿಳಂಬವಾಗಿ ವರ್ಷದ ಕೊನೆಯಲ್ಲಿ ಹಲವಾರು ಯೋಜನೆಗಳು ಪ್ರಾರಂಭವಾಗದೆ ಅಂದಾಜು ಪತ್ರಿಕೆಯಲ್ಲಿ ಯೋಜನೆಗಳಿಗಾಗಿ ತೆಗೆದಿಟ್ಟ ಹಣ ಖರ್ಚಾಗದೆ ಉಳಿಯುತ್ತಿರುವುದನ್ನು ಕಾಣುತ್ತೇವೆ. ಸಣ್ಣ ನೀರಾವರಿಗೆ ಪ್ರತ್ಯೇಕ ಖಾತೆಯಾದ ಕೂಡಲೇ ತೀವ್ರಗತಿಯಲ್ಲಿ ಸುಗಮವಾಗಿ ಕೆಲಸ ನಡೆಯುತ್ತದೆಂದು ತಿಳಿಯುವುದು ಮೂರ್ಖತನವೇ ಸರಿ ಈಗಿರುವ ಆಡಳಿತ ಪದ್ಧತಿ ಅತ್ಯಂತ ಅಸಮರ್ಪಕವಾದ ಕಾಯಿದೆ, ಕಾನೂನು, ವಿಧಿ, ವಿಧಾನಗಳನ್ನು ಹೊಂದಿಕೊಂಡಿರುವುದರಿಂದ ಕಾರ್ಯ ಮಂದಗತಿಯಿಂದಲೇ ಸಾಗುತ್ತಿದೆ. ಆದ್ದರಿಂದ ಆಮೂಲಾಗ್ರ ಬದಲಾವಣೆ ಆಡಳಿತೆಯಲ್ಲಾಗುವುದು ಅತ್ಯಗತ್ಯ. ಸದ್ಯದ ಪರಿಸ್ಥಿತಿಯಲ್ಲಿ ನೌಕರದಾರ ವರ್ಗ, ಅಧಿಕಾರಿಗಳ ಅಧಿಕಾರವೇ ಪ್ರಾಧಾನ್ಯವಾಗಿದೆ. ಇವರ ಬಿಗಿ ಹಿಡಿತದಿಂದ ಪಾರುಮಾಡಿಕೊಳ್ಳುವುದು ಪ್ರಥಮ ಕರ್ತವ್ಯವಾಗಿದೆ.

ನಗರ ಸಭೆ ನೌಕರದಾರರ ಸಂಬಳದಲ್ಲಿರುವ ಅಂತರ ನಿವಾರಣೆಯ ಪ್ರಕರಣ ಕಳೆದ ನಾಲ್ಕು ವರ್ಷಗಳಿಂದಲೂ ವಿಧಾನ ಸೌಧದಿಂದ ಮಿನಿಟವರ್, ಮಿನಿಟವರಿನಿಂದ ವಿಧಾನ ಸೌಧಕ್ಕೆ ಹಾರಾಡುತ್ತಲೇ ಇದೆ. ಈಗ ಆ ಕಾಗದ ಪತ್ರಗಳೇ ನಾಪತ್ತೆಯಾಗಿವೆ. ಬಿಜಾಪುರದಲ್ಲಿ ಕೆಲವು ತಿಂಗಳ ಹಿಂದೆ ಮಾರ್ಕೇಟ್ ಸುಟ್ಟಾಗ ಹೊಸ ಮಾರ್ಕೇಟ್ ಕಟ್ಟುವ ಸಲುವಾಗಿ ಟೆಂಡರ್ ಕರೆದು ಅದನ್ನು ಮಂಜೂರಿಗಾಗಿ ವಿಧಾನ ಸೌಧಕ್ಕೆ ಕಳುಹಿಸಲಾಗಿದೆ. ಸ್ವತಃ ಬಿಜಾಪುರ ನಗರ ಸಭೆಯ ಕಮಿಶನರ್ ಅಂಥ ಕಾಗದ ಪತ್ರ ಹಿಡಿದು ಕೊಂಡು ತಿರುಗಾಡಿದರೂ ಅದು ಮುಂದೆ ಸಾಗಲಿಲ್ಲ, ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಮರ್ಯಾದೆಯ ಪ್ರಶ್ನೆಯಾಗಿರುವುದರಿಂದ ನಾನು ಸ್ವತಃ ಅವರಿಂದಲೇ ಲೋಕೋಪಯೋಗಿ ಖಾತೆಯ ಕಾರ್ಯದರ್ಶಿಯವರಿಗೆ ಹೇಳಿಸಿದರೂ, ಟೆಂಡರಿನ ಕೊನೆ ತಾರೀಕು ಮಾರ್ಚ್ 5 ರಂದು ಮುಗಿದರೂ ಕೂಡ, ಆ ಕಾಗದ ಪತ್ರ ವಿಧಾನ ಸಭೆಯಲ್ಲಿ ನಿಧಾನ ನಿದ್ರಾವಸ್ಥೆಯಲ್ಲಿಯೇ ಇದೆ.

ಜನತಾ ಸರಕಾರ ಅಧಿಕಾರದಲ್ಲಿದ್ದರೂ ಕೂಡ ವಿಧಾನಸಭೆಯಲ್ಲಿಯ ಕಾರ್ಯ ವಿಧಾನದಲ್ಲಿ ಯಾವದೇ ಬದಲಾವಣೆಯಿಲ್ಲ, ಸಣ್ಣ ನೀರಾವರಿ ಖಾತೆ ಪ್ರಾರಂಭವಾದರೂ ಇದೇ ಗತಿಯೇ ಆಗಬಾರದಪ್ಪಾ ಎಂದೇ ನಮ್ಮಾಸೆ.

ಸರ್ಕಾರಿಯಾ ಆಯೋಗದ ಪ್ರಶ್ನಾವಳಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಉತ್ತರ

ಪ್ರಸ್ತಾವನೆ

34 ವರ್ಷಗಳ ಹಿಂದೆ ಯಾವ ಸನ್ನಿವೇಶದಲ್ಲಿ ಭಾರತದ ಸಂವಿಧಾನವನ್ನು ರಚಿಸಲಾಯಿತು ಮತ್ತು ಅದು ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಹೇಳಬೇಕಾಗಿದೆ. ಈ ಪ್ರಶ್ನೆಯನ್ನು ನಾವು ಕಾನೂನು-ನ್ಯಾಯ ದೃಷ್ಟಿಯಿಂದಲ್ಲದೆ ಚಾರಿತ್ರಿಕ-ರಾಜಕೀಯ ದೃಷ್ಟಿಯಿಂದ ನೋಡುತ್ತೇವೆ. ಏಕೆಂದರೆ ಎಲ್ಲ ದೇಶದ ಸಂವಿಧಾನಗಳಂತೆ ನಮ್ಮ ಸಂವಿಧಾನವೂ ನಿರ್ದಿಷ್ಟ ಸಮಾಜಿಕ ರಾಜಕೀಯ ಸಂಬಂಧಗಳನ್ನು ಪ್ರತಿನಿಧಿಸುತ್ತದೆ.

ಒಂದೂವರೆ ಶತಮಾನಗಳ ಕಾಲ ನಮ್ಮನ್ನಾಳಿದ ಬ್ರಿಟಿಷರು ಅತ್ಯಂತ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರು. ಆದ್ದರಿಂದಲೇ ನಮ್ಮ ಸ್ವಾತಂತ್ರ್ಯ ಚಳುವಳಿಯು ಜಾತಿ, ಮತ ಭಾಷೆಗಳನ್ನು ಮೀರಿದ ಎಲ್ಲರನ್ನು ಒಳಗೊಳ್ಳುವ ಚಳುವಳಿಯಾಗಿ ಬೆಳೆಯಿತು. ಇದರ ಅಪಾಯವನ್ನು ಮನಗಂಡು ಐಕ್ಯತೆಯನ್ನು ಮುರಿಯಲು ಬ್ರಿಟಿಷರು ಪ್ರಯತ್ನಿಸಿದರು. ಒಡೆದು ಆಳುವ ನೀತಿಗೆ ಅನುಗುಣವಾಗಿ ಹಿಂದೂ ಯೇತರರನ್ನು, ಹಿಂದುಳಿದ ಜಾತಿಗಳವರನ್ನು ಮತ್ತು ಪಟ್ಟಣದ ವ್ಯಾಪಾರೀ ವರ್ಗ ಹಾಗೂ ಭೂ ಮಾಲೀಕರನ್ನು ಕಾಂಗ್ರೆಸ್ ವಿರುದ್ಧ ಎತ್ತಿ ಕಟ್ಟಲು ಪ್ರಯತ್ನಿಸಿದರು ಬ್ರಿಟಿಷರು ಜಾರಿಗೆ ತಂದ ಸಂವಿಧಾನಾತ್ಮಕ ಸುಧಾರಣೆಗಳೆಲ್ಲವೂ ಈ ಆಸಕ್ತ ಹಿತಾಸಕ್ತಿಗಳನ್ನು ರಕ್ಷಿಸಲೇ ಆಗಿದ್ದವು.

ಇವೆಲ್ಲಕ್ಕಿಂತ ಮಿಗಿಲಾಗಿ ಹಿಂದೂ-ಮುಸ್ಲಿಂ ಸಮಸ್ಯೆಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡರು ಈ ಅಂಶವನ್ನು ರಾಷ್ಟ್ರೀಯ ನಾಯಕರುಗಳು ಮನಗೊಂಡರೂ ಪ್ರಜಾಸತ್ತಾತ್ಮಕ ಜಾತ್ಯಾತೀತ ಚಳುವಳಿಯನ್ನು ಕಟ್ಟುವಲ್ಲಿ ವಿಫಲರಾದರು. ಆದ್ದರಿಂದಲೇ ಸ್ವಾತಂತ್ರ್ಯ ಚಳುವಳಿಯ ಸಮಾರೋಪವು ವಿದೇಶಿ ಆಳುವವರ ಹಾಗೂ ಅವರ ದೇಶಿಯ ಮಿತ್ರರ ನಡುವಿನ ರಾಜಿಯಾಗಿದೆ. ಪರಿಣಾಮವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳೆದು ಬಂದ ಐಕ್ಯತೆ ಒಡೆದು ದೇಶ ಹೋಳಾಯಿತು. ಇದರೊಟ್ಟಿಗೆ ಹಿಂದೂ-ಮುಸ್ಲಿಂ ಮತ್ತು ಮುಸ್ಲಿಂ-ಸಿಖ್ಖರ ಸಂಬಂಧ ಹದಗೆಟ್ಟಿತು.

ಮೇಲಿನ ಚಾರಿತ್ರಿಕ ಹಿನ್ನೆಲೆಯಲ್ಲಿ ರಚಿತವಾದ ಸಂವಿಧಾನದಲ್ಲಿ, ಬ್ರಿಟಿಷರು 1935 ಸಂವಿಧಾನದಲ್ಲಿ ರಾಜ್ಯಗಳ ರಾಜ್ಯಪಾಲರುಗಳಿಗೆ ನೀಡಿದ್ದ ಎಲ್ಲ ಅಧಿಕಾರಗಳನ್ನು ಉಳಿಸಿಕೊಂಡು ಹೊಸ ಆಡಳಿತಗಾರರು ವಿರೋಧ ಪಕ್ಷವನ್ನು ಮಂತರ ಆಳುವ ಪಕ್ಷಗಳ ವಿರೋಧಿ ದನಿಯನ್ನು ಹತ್ತಿಕ್ಕಲು ಬಳಸಿಕೊಂಡರು.

ಈ ಪ್ರಕ್ರಿಯೆಯಿಂದಾಗಿ ಧಾಳಿಗೊಳಗಾಗಿದ್ದೆಂದರೆ ಫೆಡರಲ್ ವ್ಯವಸ್ಥೆಯೊಳಗಿನ ರಾಜ್ಯಗಳ ಸ್ವಾಯತ್ತತೆ. ರಾಜ್ಯಗಳ ಸ್ವಾಯತ್ತತೆ ಮಾತ್ರವೇ ಸ್ವಾತಂತ್ರ್ಯ ಚಳುವಳಿಯಲ್ಲಿ ಸಾಧಿಸಿದ ಐಕ್ಯತೆಯನ್ನು ರಕ್ಷಿಸಬಲ್ಲದು. ಏಕೆಂದರೆ (1) ಸ್ವಾತಂತ್ರ್ಯ ಚಳುವಳಿ ಬೆಳೆದಂತೆ ಭಾಷಾ ಸಮುದಾಯವು ತನ್ನ ನಿರ್ದಿಷ್ಟ ಅಸ್ತಿತ್ವಕ್ಕಾಗಿ ಪ್ರತ್ಯೇಕ ರಾಜ್ಯಗಳಿಗಾಗಿ ಬೇಡಿಕೆಯನ್ನಿಟ್ಟಿತು. (2) ಹಿಂದೂ ಬಹುಮತದ ಕೇಂದ್ರ ಮತ್ತು ರಾಜ್ಯಗಳಿಗೆ ಪರ್ಯಾಯವಾಗಿ ಮುಸ್ಲಿಂ ಬಹುಮತದ ರಾಜ್ಯಗಳಿಗೆ ಸ್ವಾಯತ್ತತೆಯನ್ನು ಮುಸ್ಲಿಂರು ಕೇಳಿದರು. (3) ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಮುಸ್ಲಿಂರನ್ನು ಒಳಗೊಳ್ಳಲು ಈ ಬೇಡಿಕೆಯನ್ನು ರಾಷ್ಟ್ರೀಯ ನಾಯಕರುಗಳು ಒಪ್ಪಿದರು.

1947 ರಲ್ಲಿ ಬ್ರಿಟಿಷರಿಂದ ಭಾರತದ ಬಂಡವಾಳಶಾಹಿಗಳಿಗೆ ಅಧಿಕಾರ ವರ್ಗವಾದಾಗ ತಮ್ಮ ಅನುಕೂಲಕ್ಕಾಗಿ ಈ ಹಿಂದೆ ಒಪ್ಪಿದ್ದ ಫೆಡರಲ್ ರಚನೆ, ರಾಜ್ಯಗಳ ಸ್ವಾಯತ್ತತೆ ಮತ್ತು ಭಾಷಾವಾರು ಪ್ರಾಂತಗಳ ರಚನೆಯನ್ನು ಕೈ ಬಿಟ್ಟರು. 1950 ರ ಸಂವಿಧಾನವು ಫೆಡರಲ್ ಸ್ವರೂಪದ್ದೆಂದು ಹೇಳಿದರು ವಾಸ್ತವದಲ್ಲಿ ಕೇಂದ್ರೀಕೃತ ವ್ಯವಸ್ಥೆಯಾಯಿತು. ಕಾಂಗ್ರೆಸ್ ಪಕ್ಷ ಕೇಂದ್ರ ಮತ್ತು ರಾಜ್ಯಗಳಲ್ಲಿ ನಿರಂತರವಾಗಿ ಅಧಿಕಾರದಲ್ಲಿ ಮುಂದುವರಿದು ಫೆಡರಲ್ ವ್ಯವಸ್ಥೆಯನ್ನು ವಿಕೃತಗೊಳಿಸಿತು.

ಆದ್ದರಿಂದಲೇ ಕಾಂಗ್ರೆಸ್ಸೇತರ ಸರ್ಕಾರ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಕೇಂದ್ರ-ರಾಜ್ಯ ಸಮಸ್ಯೆ ಬಿರುಸುಗೊಳ್ಳುತ್ತಿದೆ ಇತ್ತೀಚಿನ ದಿನಗಳಲ್ಲಿ ರಾಜ್ಯಗಳಲ್ಲಿನ ಕಾಂಗ್ರೆಸ್ ಸರ್ಕಾರಗಳು ರಾಜ್ಯಗಳ ಸ್ವಾಯತ್ತತೆಗೆ ವಿರೋಧ ಪಕ್ಷಗಳೊಡನೆ ದನಿಗೂಡಿಸುತ್ತಿದೆ. ಈ ಪ್ರಶ್ನೆಯನ್ನು ಸಂಪೂರ್ಣವಾಗಿ ಪರಾಮರ್ಶಿಸಬೇಕಾಗಿದ್ದು ನಮ್ಮ ಪಕ್ಷದ ನಿಲುವು ಕೆಳಗಿನಂತಿದೆ.

ನಮ್ಮ ಪಕ್ಷವು ದೇಶದ ಐಕ್ಯತೆಗೆ ಬದ್ಧವಾಗಿದ್ದು ಎಲ್ಲ ವಿಚ್ಛಿದ್ರಕಾರಕ ಶಕ್ತಿಗಳ ವಿರುದ್ಧ ಹೋರಾಡುತ್ತದೆ. ಅಲ್ಲದೆ ವಿದೇಶ ನೀತಿ, ಸಂಪರ್ಕ, ವಿದೇಶಿ ವ್ಯಾಪಾರ ಮುಂತಾದವುಗಳನ್ನು ದಕ್ಷತೆಯಿಂದ ನಿರ್ವಹಿಸಲು ಬೇಕಾದ ಅಧಿಕಾರ ಕೇಂದ್ರ ಸರ್ಕಾರದೊಡನಿರಬೇಕು. ಆದರೆ ದುರದೃಷ್ಟದಿಂದ ಜನತೆ ಬಯಸುವ ದೇಶದಐಕ್ಯತೆಯನ್ನು ಆಡಳಿತ ಪಕ್ಷ ಕೇಂದ್ರ ಸರ್ಕಾರಕ್ಕೆ ಸರ್ವಾಧಿಕಾರಿ ಅಧಿಕಾರ ದೊರಕುವಂತೆ ಬಳಸಿಕೊಳ್ಳುತ್ತಿದೆ. ಸಂವಿಧಾನಕ್ಕೆ ತಂದ 42ನೇ ತಿದ್ದುಪಡಿ ಅಕ್ಷರಶಃ ರಾಜ್ಯಗಳನ್ನು ಕೇಂದ್ರ ಸರ್ಕಾರಕ್ಕೆ ಅಧೀನವನ್ನಾಗಿ ಮಾಡಿದೆ. ಆದ್ದರಿಂದಲೇ ಕೇಂದ್ರ ರಾಜ್ಯಗಳ ಸಂಭಂಧದ ಪ್ರಶ್ನೆ ಕೇವಲ ದೇಶದ ಐಕ್ಯತೆಯನ್ನು ರಕ್ಷಿಸುವುದಕ್ಕೆ ಸಂಭಂಧಿಸದೆ ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರಿ ಶಕ್ತಿಗಳ ನಡುವಿನ ಹೋರಾಟಕ್ಕೆ ಸಂಬಂಧಿಸಿದೆ. ಆಸಕ್ತ ಹಿತಾಸಕ್ತಿಗಳ ಪರವಾದ ಕೇಂದ್ರ ಸರ್ಕಾರದ ನೀತಿ, ಜನ ಸಮುದಾಯದ ಬಡತನ, ಆರ್ಥಿಕ ಬಿಕ್ಕಟ್ಟಿನಿಂದಾಗಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮತ್ತು ರಾಜ್ಯಗಳ ಹಕ್ಕುಗಳ ಮೇಲೆ ಧಾಳಿ ತೀವ್ರವಾಗುತ್ತಿದೆ.

ಶಕ್ತಿಗಳನ್ನು ಸದೆ ಬಡೆಯಲು ಸ್ವಾಯತ್ತತೆ ಅನಿವಾರ್ಯವಾಗಿದೆ. ಸ್ವಾಯತ್ತತೆಯೇ ಭಾರತೀಯರ ಎಲ್ಲ ಸಮಸ್ಯೆಗೆ ಪರಿಹಾರ ನೀಡುವುದಿಲ್ಲ. ಆದರೆ ಈ ಅಧಿಕಾರ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮೇಲಿರುವ ಆಸಕ್ತ ಹಿತಾಸಕ್ತಿಗಳ ಹಿಡಿತವನ್ನು ಸಡಿಲಗೊಳಿಸಲು ಜನತೆಗೆ ಅನುವು ಮಾಡಿಕೊಡುತ್ತದೆ.

ಶಾಸಕಾಂಗೀಯ ಸಂಬಂಧಗಳು

ಈಗಾಗಲೇ ಸಂವಿಧಾನದಲ್ಲಿ ರಾಜ್ಯ ಮತ್ತು ಕೇಂದ್ರಗಳ ನಡುವೆ ಶಾಂಸಕಾಂಗೀಯ ಅಧಿಕಾರವನ್ನು ಹಂಚಿರುವ

> 'ರಾಜ್ಯ ಸರ್ಕಾರಗಳು ವೈಭವೀಕರಿಸಿದ ಮುನಿಸಿಪಾಲಿಟಿಗಳು' ಎಂಬ ಮಾತನ್ನು ಕಮ್ಯೂನಿಸ್ಟ್ ಪಕ್ಷ ಹೇಳಿದಾಗ ಹಲವರಿಗೆ ಪಥ್ಯವಾಗಲಿಲ್ಲ. ಆದರೆ ಪ್ರಸ್ತುತ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ತೀವ್ರ ಬಿಕ್ಕಟ್ಟಿಗೆ ಒಳಗಾಗಿದ್ದು ಮತ್ತು ಅನೇಕ ರಾಜ್ಯಗಳಲ್ಲಿ ಕಾಂಗ್ರೆಯೇತರ ಸರ್ಕಾರಗಳು ಅಸ್ತಿತ್ವಕ್ಕೆ ಬಂದಿದ್ದು, ಕೇಂದ್ರ ರಾಜ್ಯಗಳ ಸಂಬಂಧ ಕುರಿತಂತೆ ಎಲ್ಲರೂ ವಿಚಾರ ಮಾಡಲು ಪ್ರಾರಂಭಿಸಿದ್ದಾರೆ. ಈ ಪ್ರಕ್ರಿಯೆಯ ಭಾಗವಾಗಿ ಕೇಂದ್ರ ಸರ್ಕಾರ ಒಲ್ಲದ ಮನಸ್ಸಿನಿಂದ ಕೇಂದ್ರ ರಾಜ್ಯಗಳ ಸಂಬಂಧವನ್ನು ಪರಾಮರ್ಶಿಸಲು ಸರ್ಕಾರಿಯಾ ಆಯೋಗವನ್ನು ರಚಿಸಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಇಡೀ ಸಮಸ್ಯೆಯನ್ನು ಅದರ ಎಲ್ಲ ಸೂಕ್ಷ್ಮಗಳೊಂದಿಗೆ ವಿಶ್ಲೇಷಿಸುತ್ತಾ ತನ್ನ ವಿಚಾರವನ್ನು ಆಯೋಗದ ಮುಂದಿಟ್ಟಿದೆ.

ರಾಜ್ಯಗಳು ಕೇಂದ್ರ ಸರ್ಕಾರವನ್ನು ಆರ್ಥಿಕವಾಗಿ ಅವಲಂಬಿಸಿವೆ. ರಾಜ್ಯಗಳ ಯೋಜನೆಗಳನ್ನು ಕೇಂದ್ರದ ಯೋಜನೆಗೆ ಅನುಗುಣವಾಗಿ ಬದಲಾಯಿಸಬೇಕಾಗಿದೆ. ರಾಜ್ಯದ ಜನತೆಯ ಅವಶ್ಯಗಳಿಗೆ ಅನುಗುಣವಾಗಿ ಯೋಜನೆಯನ್ನು ಕೈಗೊಳ್ಳಲಾಗುತ್ತಿಲ್ಲ. ತುರ್ತು ಪರಿಸ್ಥಿತಿಯಲ್ಲಿ ಸಂವಿದಾನಕ್ಕೆ ತಂದ ತಿದ್ದುಪಡಿಗಳಿಂದಾಗಿ ಅಧಿಕಾರ ಮತ್ತಷ್ಟು ಕೇಂದ್ರೀಕೃತವಾಗಿದೆ.

ರಾಜ್ಯಗಳಲ್ಲಿನ ರಾಜ್ಯಪಾಲರುಗಳನ್ನು ಉಪಯೋಗಿಸಿಕೊಂಡು ಕಾಂಗ್ರೆಸ್ ಅಲ್ಪ ಮತದ ಸರ್ಕಾರಗಳನ್ನು ಹೇರುವುದು ಸಾಮಾನ್ಯವಾಗಿದೆ. ಅಲ್ಲದೆ [ರಾಜ್ಯಗಳು ಅನುಮೋದಿಸಿದ ಮಸೂದೆಗಳಿಗೆ ಅಧ್ಯಕ್ಷರು ಅಂಗೀಕಾರ ನೀಡದೆ ರಾಜ್ಯ ಸರ್ಕಾರಗಳ ಅಧಿಕಾರವನ್ನು ಮೊಟಕುಗೊಳಿಸಿದೆ.

ದೇಶದ ಪ್ರಗತಿಗೆ ಕೇಂದ್ರ-ರಾಜ್ಯಗಳ ನಡುವೆ ನಿಜವಾದ ಸಮನ್ವಯತೆ ಬೇಕು. ಆದ್ದರಿಂದಲೇ ನಮ್ಮ ಪಕ್ಷ ರಾಜ್ಯಗಳ ಸ್ವಾಯತ್ತತೆಯನ್ನು ಒತ್ತಿ ಹೇಳುತ್ತದೆ. ದೇಶದ ಐಕ್ಯತೆಯನ್ನು ಬಲಪಡಿಸಲು ಮತ್ತು ವಿಚ್ಛಿದ್ರಕಾರಿ

ಕುರಿತಂತೆ ನಾವು ಒಪ್ಪುತ್ತೇವೆಂದು ಅರ್ಥವಲ್ಲ ಎಂಬುದು ಮೇಲಿನ ಅಂಶಗಳಿಂದ ತಿಳಿಯುತ್ತದೆ. ಬದಲಾಗಿ 1935 ರ ಕಾಯ್ದೆಯಲ್ಲಿರುವಂತೆಯೇ ಪ್ರಸ್ತುತ ಸಂವಿಧಾನದಲ್ಲಿಯೂ ಅಧಿಕಾರವನ್ನು ಹಂಚಲಾಗಿದೆ. ಇದನ್ನು ಕುರಿತಂತೆ ಕಾಂಗ್ರೆಸ್ ಪಕ್ಷವೇ ತನ್ನ ಅಸಮಾಧಾನವನ್ನು ವ್ಯಕ್ತ ಪಡಿಸಿದೆ. ಈಗಿರುವ ವ್ಯವಸ್ಥೆಯಂತೆ ಕೇಂದ್ರ ಸರ್ಕಾರ ಹೆಚ್ಚು ಅಧಿಕಾರವನ್ನು ಹೊಂದಿದೆ. ಅಲ್ಲದೆ ರಾಜ್ಯಗಳ ಮಸೂದೆಯನ್ನು ಅಧ್ಯಕ್ಷರ ಅನುಮೋದನೆಗೆ ಕಳಿಸುವ ಅಧಿಕಾರ ರಾಜ್ಯಪಾಲರುಗಳಿಗಿದೆ.

ಆದ್ದರಿಂದ ರಾಜ್ಯಗಳಿಗೆ ತನ್ನ ಪರಿಧಿಯೊಳಗೆ ಬರುವ ವಿಷಯಗಳನ್ನು ಕುರಿತಂತೆ ಶಾಸನ ಮಾಡುವ ಪರಮಾಧಿಕಾರವನ್ನು ನೀಡಬೇಕು. ಇದಕ್ಕೆ ಅನುಗುಣವಾಗಿ ಸಂವಿಧಾನದ 248 ನೆ ವಿಧಿಯನ್ನು ತಿದ್ದುಪಡಿ ಮಾಡಬೇಕು. ಅಂತೆಯೇ 249 ನೇ ವಿಧಿಯನ್ನು ತೆಗೆದು ಹಾಕಬೇಕು.

ರಾಜ್ಯಗಳ ಅಧಿಕಾರದ ಪರಿಧಿಯನ್ನು ವಿಸ್ತರಿಸುವಾಗಲೇ ದೇಶದ ಪ್ರಗತಿ ಮತ್ತು ಭದ್ರತೆಗೆ ಬೇಕಾದ ಅಧಿಕಾರ ಕೇಂದ್ರದೊಡನೆ ಇರುವಂತೆ ನೋಡಿಕೊಳ್ಳಬೇಕು. ಆರ್ಥಿಕ ಸಮನ್ವಯತೆ ಮತ್ತು ಯೋಜನೆ ಕುರಿತಂತೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ನಿರ್ದೇಶನದಂತೆ ನಡೆದುಕೊಳ್ಳಬೇಕು. ಪ್ರಸ್ತುತದಲ್ಲಿ ಯೋಜನಾ ಆಯೋಗವಾಗಲೀ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಾಗಲೀ ಸಂವಿಧಾನದಲ್ಲಿ ಉಲ್ಲೇಖವಾಗಿಲ್ಲ. ಈ ದೋಷವನ್ನು ನಿವಾರಿಸಿ ಅವುಗಳು ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡುವಂತೆ ಮಾಡಬೇಕಾಗಿದೆ. ಕಾನೂನು-ವ್ಯವಸ್ಥೆ ಮತ್ತು ಪೋಲೀಸ್ ವಿಷಯಗಳು ಸಂಪೂರ್ಣವಾಗಿ ರಾಜ್ಯದ ಪರಿಧಿಯೊಳಗಿರಬೇಕು.

ರಾಜ್ಯಪಾಲರ ಪಾತ್ರ

ಬ್ರಿಟಿಷರು ಭಾರತಕ್ಕೆ ನೀಡಿದ ಸಂವಿಧಾನದಿಂದ ತೆಗೆದುಕೊಂಡಿರುವ ವಿಷಯ ಇದಾಗಿದೆ. ಅಂದಿನಂತೆಯೇ ಇಂದು ರಾಜ್ಯಪಾಲರು ಕೇಂದ್ರದ ಏಜೆಂಟರು. ರಾಜ್ಯದ ಜನತೆ ತಮಗೆ ಬೇಕಾದ ಸರ್ಕಾರವನ್ನು ಆಯ್ದುಕೊಳ್ಳಲು ಸಾಧ್ಯವಾಗದಂತೆ ಈ ಹುದ್ದೆಯನ್ನು ಕೇಂದ್ರದಲ್ಲಿರುವ ಆಳುವ ಪಕ್ಷ ಉಪಯೋಗಿಸಿಕೊಳ್ಳುತ್ತಿದೆ. ರಾಜ್ಯಪಾಲರು ರಾಜ್ಯದ ಚುನಾಯಿತ ಸರ್ಕಾರಕ್ಕೆ ಬದ್ಧರಾಗಿಲ್ಲದೆ ಕೇಂದ್ರ ಸರ್ಕಾರಕ್ಕೆ ಬದ್ಧರಾಗಿದ್ದಾರೆ.

ಆಡಳಿತಾತ್ಮಕ ಸಂಬಂಧಗಳು

ಕೇಂದ್ರ ಸರ್ಕಾರವು ರಾಜ್ಯಪಾಲರ ಮೂಲಕವಲ್ಲದೆ ಇನ್ನಿತರ ಕ್ರಮಗಳ ಮೂಲಕ ರಾಜ್ಯದ ಆಡಳಿತದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ತಲೆ ಹಾಕುತ್ತದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ರಾಜ್ಯ ಸರ್ಕಾರಗಳನ್ನು ವಜಾ ಮಾಡುವುದು. ವಿಧಾನ ಸಭೆಗಳನ್ನು ವಿಸರ್ಜಿಸುವುದು ಮುಂತಾದವುಗಳು.

ಅಖಿಲ ಭಾರತ ಸೇವೆಗಳಾದ ಐ. ಎ. ಎಸ್, ಐ.ಪಿ.ಎಸ್ ಹುದ್ದೆಗಳನ್ನು ಕಿತ್ತು ಹಾಕಬೇಕು. ಕೇವಲ ಕೇಂದ್ರ ಸೇವೆ ಮತ್ತು ರಾಜ್ಯ ಸೇವೆಗಳಿದ್ದು ಅವುಗಳಿಗೆ ಸಂಬಂಧಪಟ್ಟ ಸರ್ಕಾರಗಳು ಅಧಿಕಾರಿಗಳನ್ನು ಭರ್ತಿ ಮಾಡಬೇಕು.

(6ನೇ ಪುಟ ನೋಡಿ)

ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳಿಗೆ ಗೌರವಾರ್ಪಣೆ - ಅಂದು ಮತ್ತು ಇಂದು

— ಪಿ. ರಾಮಮೂರ್ತಿ

ತಮ್ಮ ಅಪಾರ ದೇಶ ಪ್ರೇಮ, ತ್ಯಾಗ-ಬಲಿದಾನಗಳಿಂದ ಕೆಚ್ಚೆದೆಯ ಸಾಹಸಗಳಿಂದ ಅಸಂಖ್ಯ ತರುಣರಿಗೆ, ದೇಶ ಪ್ರೇಮಿ ಕ್ರಾಂತಿಕಾರಿಗಳಿಗೆ ಇಂದಿಗೂ ಕೂಡ ಸ್ಫೂರ್ತಿಯುಕ್ಕಿಸಿ ರೋಮಾಂಚನಗೊಳಿಸುತ್ತಿರುವ ಸ್ವಾತಂತ್ರ್ಯ ಹೋರಾಟದ ಧೀರ ಸೇನಾನಿ ಭಗತ್ ಸಿಂಗ್ ಮತ್ತವರ ಸಹಚರರಾದ ರಾಜಗುರು ಹಾಗೂ ಸುಖದೇವ್ ಅವರ ದೇಹಗಳು ಬ್ರಿಟಿಶ್ ನರರಾಕ್ಷಸರ ನೇಣುಗಂಬದಲ್ಲಿ ತೂಗಾಡಿ 53 ವರುಷಗಳು ಗತಿಸಿವೆ. ಈ ಹುತಾತ್ಮರನ್ನು ಹಾಡಿ ಹೊಗಳುವ ಇಂದಿನ ಕಾಂಗ್ರೆಸ್ಸ್ ಈ ಬಗ್ಗೆ ಅಂದು ಹೊಂದಿದ್ದ ಧೋರಣೆಗಳೇನು ? ಸಿ. ಪಿ. ಐ. (ಎಂ) ನ ಪೊಲಿಟ್ ಬ್ಯೂರೋ ಸದಸ್ಯರಾದ ಕಾ. ಪಿ. ರಾಮ ಮೂರ್ತಿ ಯವರ ಲೇಖನ ಇದನ್ನು ಉತ್ತರಿಸುತ್ತದೆ.

ಕಳೆದ ವಾರ ರಾಷ್ಟ್ರಪತಿ ಗ್ಯಾನಿ ಜೇಲ್ ಸಿಂಗ್‌ರವರು ಸರದಾರ್ ಭಗತ್ ಸಿಂಗ್, ರಾಜಗುರು ಹಾಗೂ ಸುಖದೇವರ ಪ್ರತಿಮೆಗಳನ್ನು ಅನಾವರಣಗೊಳಿಸುತ್ತಾ ಅವರ ದೇಶಪ್ರೇಮಕ್ಕೆ ಅಮೋಘ ಶ್ರದ್ಧಾಂಜಲಿ ಅರ್ಪಿಸಿದರು. ಅವರ ದೇಶಪ್ರೇಮದ ಚಟುವಟಿಕೆಗಳು ಅಂದಿನ ಸಾವಿರಾರು ಯುವಕರಿಗೆ ಸ್ಫೂರ್ತಿ ನೀಡಿದವು ಎನ್ನುವ ಮಟ್ಟದ ವರೆಗೂ ಅವರ ಪ್ರಶಂಸೆ ತಲುಪಿತು.

ಇವೆಲ್ಲಾ ಸತ್ಯ ಸಂಗತಿಗಳು ನಿಜ ಆದರೆ ದೇಶದ ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆಗಾಗಿ ನಗುನಗುತ್ತಾ ನೇಣುಗಂಬವನ್ನೇರಿದ ಈ ಧೀರ ಯುವಕರ ಬಗ್ಗೆ ಕಾಂಗ್ರೆಸ್ಸಿನ ನಿಲುವು ಹಾಗೂ ಪಾತ್ರವಾದರೂ ಏನಿತ್ತು ?

1928 ರಲ್ಲಿ ದೆಹಲಿಯಲ್ಲಿ ಕೇಂದ್ರೀಯ ವಿಧಾನ ಪರಿಷತ್ತು ಸರಕಾರಕ್ಕೆ ಯಾವುದೇ ವ್ಯಕ್ತಿಯನ್ನು ವಿಚಾರಣೆಯಿಲ್ಲದೆ ಬಂಧಿಸುವ ಅಧಿಕಾರ ನೀಡುವ ಸಾರ್ವಜನಿಕ ರಕ್ಷಣಾ ಮಸೂದೆಯನ್ನು ಚರ್ಚಿಸುತ್ತಿದ್ದಾಗ ಭಗತ್ ಸಿಂಗ್ ಹಾಗೂ ಅವರ ಸಂಗಾತಿ ಬಟುಕೇಶ್ವರದತ್ ಅಲ್ಲಿ ಬಂದು ಬಾಂಬನ್ನು ಎಸೆದರು ಎಂಬ ಸಂಗತಿ ಎಲ್ಲರಿಗೂ ತಿಳಿದಿದೆ ರೌಲಟ್ ಆ್ಯಕ್ಟ್ ಎಂಬ ಕರಾಳ ಶಾಸನಕ್ಕೆ ವ್ಯಕ್ತಪಡಿಸಿದ ಪ್ರತಿಭಟನೆಯಾಗಿತ್ತದು. ಕೌನ್ಸಿಲ್‌ನಲ್ಲಿ ಅವರು ಎಸೆದ ಕರಪತ್ರಗಳಲ್ಲಿ ಇದನ್ನು ಸ್ಪಷ್ಟವಾಗಿ ನಿರೂಪಿಸಲಾಗಿತ್ತು ತಕ್ಷಣವೇ ಅವರ ಬಂಧನವಾಯಿತು ಮುಂದೆ ವಿಚಾರಣೆ ನಡೆಯುತ್ತಿದ್ದಂತೆ ಲಾಹೋರಿನ ಒಬ್ಬ ಪೋಲೀಸ್ ಅಧಿಕಾರಿಯ ಕೊಲೆ ಕೃತ್ಯದಲ್ಲಿ ಇವರಿಬ್ಬರು ಮತ್ತು ರಾಜಗುರು ಮತ್ತು ಸುಖದೇವ್ ಸೇರಿದಂತೆ ಇನ್ನಿತರರೂ ಸೇರಿದ್ದರು ಎಂದು ಸರಕಾರಕ್ಕೆ ತಿಳಿದು ಬಂತು.

ಸೈಮನ್ ಕಮಿಶನ್ ಲಾಹೋರಿಗೆ ಭೇಟಿಯಿತ್ತಾಗ ನಡೆದ ಪ್ರತಿಭಟನಾ ಮತ ಪ್ರದರ್ಶನದಲ್ಲಿ ಪಂಜಾಬ್ ಕೇಸರಿ ಲಾಲಾ ಲಜಪತ್ ರಾಯ್ ನೇತೃತ್ವ ವಹಿಸಿದ್ದರು ಅಲ್ಲಿನ ಪೋಲೀಸ್ ಕಮಿಶನರನಾಗಿದ್ದ ಸರ್ ಚಾರ್ಲ್ಸ್‌ಟಿಗರ್ಟ್‌ನ ಆಜ್ಞೆಯ ಮೇರೆಗೆ ಪೋಲೀಸರು ಲಾಲಾಜಿಯವರ ತಲೆಗೆ ಗುರಿಯಿಟ್ಟು ಲಾಠಿ ಪ್ರಹಾರ ನಡೆಸಿದರು. ಲಾಲಾಜಿ ತೀವ್ರವಾಗಿ ಗಾಯಗೊಂಡರು ಅದರಿಂದ ಎಂದೂ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆಸ್ಪತ್ರೆಯಲ್ಲಿ ಅವರು ಅಸು ನೀಗಿದರು.

ಕೊಲೆಗೆ ಪ್ರತೀಕಾರ

ಸಮಸ್ತ ಭಾರತೀಯ ಜನತೆ ಇದರಿಂದ ಸಿಟ್ಟಿಗೆದ್ದಿತು. ಪಂಜಾಬಿನಲ್ಲಿ ಮಹಾನ್ ನಾಯಕನೊಬ್ಬನ ಮೇಲೆ ಈ ನಗ್ನ ಹಾಗೂ ರಾಕ್ಷಸೀ ಹಲ್ಲೆಯಿಂದಾಗಿ ಜನತೆಯ ಭಾವನೆ ತೀವ್ರವಾಗಿ ಕೆರಳಿತು. ವಾಸ್ತವವಾಗಿ ಸರ್. ಚಾರ್ಲ್ಸ್ ಟಿಗರ್ಟ್ ಭಗತ್‌ಸಿಂಗ್ ಹಾಗೂ ಇತರರ ಬಂದೂಕಿನ ಗುರಿಯಾಗಿದ್ದರು. ಕೈ ತಪ್ಪಿನಿಂದಾಗಿ ಬೇರೊಬ್ಬ ಬ್ರಿಟಿಶ್ ಪೋಲೀಸ್ ಅಧಿಕಾರಿ ಕೊಲೆಯಾದ ಇದು ಲಾಲಾ ಲಜಪತರಾಯರ ಕೊಲೆಗೆ ಪ್ರತೀಕಾರವಾಗಿತ್ತು.

ಬ್ರಿಟಿಶ್ ಆಳ್ವಿಕೆಯನ್ನು ದ್ವೇಷಿಸುತ್ತಿದ್ದವರಿಗೆಲ್ಲಾ, ವಿಶೇಷವಾಗಿ ಯುವ ಜನತೆ ಮತ್ತು ತೀವ್ರ ಗಾಮಿ ರಾಜಕೀಯ ಶಕ್ತಿಗಳಿಗೆ ಇದರಿಂದ ಬಹಳ ಸಂತೋಷವಾಗಿತ್ತು ಯಾವ ಭಾರತೀಯನಿಗೂ ಇದನ್ನು ಖಂಡಿಸುವ ಧೈರ್ಯವಿರಲಿಲ್ಲ.

ನಂತರ ಸುಪ್ರಸಿದ್ಧ ಲಾಹೋರ್ ಸಂಚು ಮೊಕದ್ದಮೆ ನಡೆಯಿತು. ಲಾಹೋರ್ ಕೋರ್ಟಿನಲ್ಲಿ ಭಗತ್ ಸಿಂಗ್ ಮತ್ತು ಆತನ ಸಂಗಾತಿಗಳ ವಿಚಾರಣೆ ನಡೆಯಿತು. ಇದಕ್ಕೆ ಸಾರ್ವಜನಿಕರಿಗಾಗಲಿ, ಪತ್ರಿಕೆಗಳಿಗಾಗಲಿ ಪ್ರವೇಶವಿರಲಿಲ್ಲ ಸೈಪುದ್ದೀನ್ ಕಿಚ್ಲೂ, ಪಂಡಿತ್ ಸಂತಾನಂ ಹಾಗೂ ಇತರರ ಪರಿಚಯವಿದ್ದ ನಮ್ಮಂತಹ ಕೆಲವು ಅದೃಷ್ಟವಂತರಿಗೆ ಈ ವಿಚಾರಣೆಯ ಬಗ್ಗೆ ತಿಳಿದಿತ್ತು. ಫಿರ್ಯಾದಿಯ ವಾದದಲ್ಲಿ ಹಲವು ಕುಂದು ಕೊರತೆಗಳಿದ್ದರೂ ಪ್ರಮುಖ ಸಾಕ್ಷಿಗಳು ಕೈಕೊಟ್ಟರೂ ಕೂಡಾ ಇಬ್ಬರು ಬ್ರಿಟಿಶ್ ನ್ಯಾಯಾಧೀಶರು ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸಿದರು.

ದೇಶಾದ್ಯಂತ ಜನತೆಗೆ ದಿಗಿಲು ಬಡಿದಂತಾಯಿತು. ಹಲವು ಸಂಘಟನೆಗಳು. ವಿಶೇಷವಾಗಿ ಕಾರ್ಮಿಕ ಸಂಘಗಳು, ಯುವ ಜನ ಹಾಗೂ ವಿದ್ಯಾರ್ಥಿ ಸಂಘಟನೆಗಳು ನೇಣುಹಾಕುವುದನ್ನು ನಿಲ್ಲಿಸಬೇಕೆಂದು ಒತ್ತಾಯ ಮಾಡಿದವು.

ಗಾಂಧೀಜಿಯ ಧಿಕ್ಕಾರ

ಈ ನಡುವೆ ಗಾಂಧೀಜಿ ದೇಶಕ್ಕೆ ತಕ್ಷಣ ಹಾಗೂ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸುವ ಲಾಹೋರ್ ಕಾಂಗ್ರೆಸ್ ನಿರ್ಣಯದ ಅನುಸಾರ 1930 ರ ಸತ್ಯಾಗ್ರಹ ಆಂದೋಲನ ಆರಂಭಿಸಿದರು. ಇದರ ಮೊದಲು ಗಾಂಧೀಜಿ ಮತ್ತು ವೈಸರಾಯ್ ನಡುವೆ ದೀರ್ಘ ಪತ್ರ ವ್ಯವಹಾರ ನಡೆದಿತ್ತು. ಅದರಲ್ಲಿ ಗಾಂಧೀಜಿ ತಮ್ಮದೇ ಆದ ಹನ್ನೊಂದು ಆರ್ಥಿಕ ಬೇಡಿಕೆಗಳನ್ನು ಈಡೇರಿಸಿದರೆ ಸ್ವಾತಂತ್ರ್ಯದ ಸಾರ ದೊರೆತಂತೆ ಎಂದು ತೃಪ್ತಿ ಪಟ್ಟುಕೊಳ್ಳುವುದಾಗಿ ತಿಳಿಸಿದ್ದರು ಈ ಹನ್ನೊಂದು ಬೇಡಿಕೆಗಳಲ್ಲಿ ಸಾಮಾನ್ಯ ಉಪ್ಪಿನ ಮೇಲೆ ಕರವನ್ನು ರದ್ದುಮಾಡುವ ಒಂದು ಬೇಡಿಕೆಯನ್ನು ಬಿಟ್ಟು ಉಳಿದವೆಲ್ಲಾ ಭಾರತೀಯ ಬೂರ್ಜ್ವಾ ವರ್ಗದ ಬೇಡಿಕೆಗಳಾಗಿದ್ದವು.

1931ರ ಜನವರಿಯಲ್ಲಿ ಗಾಂಧೀಜಿ ಮತ್ತು ಲಾರ್ಡ್ ಇರ್ವಿನ್ ನಡುವೆ ಒಂದು ಒಪ್ಪಂದ ನಡೆಯಿತು. ಅದರ ಫಲವಾಗಿ ನಾಗರೀಕ ಅಸಹಕಾರ ಆಂದೋಲನದಲ್ಲಿ ಬಂಧಿತರಾದವರ ಬಿಡುಗಡೆಯಾಯಿತು. ಆಂದೋಲನವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಯಿತು. ಲಂಡನ್‌ನಲ್ಲಿ ನಡೆಯುವ ದುಂಡು ಮೇಜಿನ ಪರಿಷತ್ತಿನ ಎರಡನೇ ಘಟ್ಟದಲ್ಲಿ ಭಾಗವಹಿಸಲು ಕಾಂಗ್ರೆಸ್ ಪ್ರತಿನಿಧಿಯನ್ನು ಕಳಿಸಲು ಗಾಂಧೀಜಿ ಒಪ್ಪಿದರು.

ಗಾಂಧೀಜಿ ಒಪ್ಪಿಕೊಂಡ ಈ ಅಂಶಗಳಿಗೆ ಸಮ್ಮತಿ ಸೂಚಿಸಲು 1931ರಲ್ಲಿ ಕರಾಚಿಯಲ್ಲಿ ಕಾಂಗ್ರೆಸ್‌ನ ತುರ್ತು ಅಧಿವೇಶನವೊಂದನ್ನು ಕರೆಯಲಾಯಿತು ಈ ಅಧಿವೇಶನದಲ್ಲಿ ಹಾಜರಿದ್ದ ಪ್ರತಿನಿಧಿಗಳಲ್ಲಿ ನಾನೂ ಒಬ್ಬ.

ದುರಹಂಕಾರೀ ಬ್ರಿಟಿಶ್ ಸರಕಾರ ಮುಂಜಾನೆ 5 ಗಂಟೆಗೆ, ಅಂದರೆ ಕರಾಚಿಯಲ್ಲಿ ಈ ಅಧಿವೇಶನ ಆರಂಭವಾಗುವ ಕೆಲವೇ ಗಂಟೆಗಳ ಮೊದಲು ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್‌ರನ್ನು ಗಲ್ಲಿಗೇರಿಸಿತು. ಅಧಿವೇಶನಕ್ಕೆ ಬಂದಿದ್ದ ಪ್ರತಿನಿಧಿಗಳಿಗೆಲ್ಲಾ ದಿಗಿಲು ಬಡಿದಂತಾಯಿತು. ವೈಸರಾಯ್‌ನೊಂದಿಗೆ ಮಾತುಕತೆ ನಡೆಸುವಾಗ ಮರಣದಂಡನೆಯ ಶಿಕ್ಷೆಯನ್ನು ಬದಲಿಸುವ ಪ್ರಶ್ನೆಯನ್ನೇ ಗಾಂಧೀಜಿ ಎತ್ತಿರಲಿಲ್ಲ ಎಂದೂ ತಿಳಿದು ಬಂತು. ಇದಕ್ಕೆ ಕೊಟ್ಟ ಕಾರಣವೆಂದರೆ ಈ ಶಿಕ್ಷೆ ಒಂದು ಹಿಂಸಾಕೃತ್ಯದ ಆರೋಪ ನ್ಯಾಯಾಲಯವೊಂದರಲ್ಲಿ ಸಾಬೀತಾದ ಮೇಲೆ ವಿಧಿಸಲ್ಪಟ್ಟಿತು; ಸ್ವಾತಂತ್ರ್ಯ ಹೋರಾಟಗಾರರು ಯಾವುದೇ ಹಿಂಸೆಯನ್ನುಂಟು ಮಾಡುವುದು ಅಹಿಂಸಾ ತತ್ವಕ್ಕೆ ಹೊರತಾದದು !

ಪ್ರಜಾಪ್ರಭುತ್ವವಾದೀ ವರ್ತನೆ ?

ನಮ್ಮಲ್ಲಿ ಕೆಲವರು ಈ ನೇಣುಶಿಕ್ಷೆಗಳನ್ನು ಖಂಡಿಸಿ ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳ ದೇಶಪ್ರೇಮದ ಉಚ್ಛ ಭಾವನೆಯನ್ನು ಕಾಂಗ್ರೆಸ್ ಮೆಚ್ಚುತ್ತದೆ ಎನ್ನುವ ಒಂದು ಠರಾವಿಗೆ ದನಿಗೂಡಿಸಿದೆವು. ಆದರೆ ಪ್ರತಿಯೊಂದು ಅನಧಿಕೃತ ಠರಾವನ್ನೂ ಕೈಗೆತ್ತಿಕೊಳ್ಳಲು ಸಮಯವಿಲ್ಲವೆಂಬ ಕಾರಣ ಹೇಳಿ ಈ ಠರಾವನ್ನು ಚರ್ಚೆಗೆತ್ತಿಕೊಳ್ಳಲಿಲ್ಲ.

ಆದರೆ ಈ ಅಧಿವೇಶನಕ್ಕೆ ಕೆಲವು ದಿನಗಳ ಹಿಂದೆ ಲಾರ್ಡ್ ಇರ್ವಿನ್ ದಿಲ್ಲಿಯಿಂದ ಮುಂಬೈಗೆ ಪಯಣಿಸುತ್ತಿದ್ದಾಗ ವೈಸ್‌ರಾಯ್‌ರ ರೈಲನ್ನು ಸ್ಫೋಟಗೊಳಿಸಲು ಪ್ರಯತ್ನ ನಡೆಸಿದ್ದಕ್ಕಾಗಿ ಕೆಲವು ಅಜ್ಞಾತ ವ್ಯಕ್ತಿಗಳನ್ನು ಖಂಡಿಸುವ ಠರಾವನ್ನು ಮಂಡಿಸಲು ಗಾಂಧೀಜಿಗೆ ಅವಕಾಶ ನೀಡಲಾಯಿತು. ರೈಲು ಹಾದು ಹೋಗುವ ಹತ್ತು ನಿಮಿಷಗಳ ಮೊದಲೇ ಟೈಂಬಾಂಬು ಸ್ಫೋಟಗೊಂಡಿದ್ದರಿಂದ ಈ ಘಟನೆಯಲ್ಲಿ ಯಾರೂ ಗಾಯಗೊಂಡಿರಲಿಲ್ಲ.

ಯುವಕ ಪ್ರತಿನಿಧಿಗಳಲ್ಲಿ ಕೆಲವರು ಈ ಠರಾವನ್ನು ತೀವ್ರವಾಗಿ ವಿರೋಧಿಸಿ ಆ ಸಂದರ್ಭವನ್ನು ಉಪಯೋಗಿಸಿಕೊಂಡು ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳ ಮರಣದಂಡನೆಯ ಶಿಕ್ಷೆಯ ಪ್ರಶ್ನೆಯನ್ನೆತ್ತುವಲ್ಲಿ ಗಾಂಧೀಜಿಯ ವಿಫಲತೆಯ ಬಗ್ಗೆ ತಮ್ಮ ಕ್ರೋಧವನ್ನು ವ್ಯಕ್ತಪಡಿಸಿದರು. "ವೈಸರಾಯ್‌ಗೆ ಗುಂಡಿಕ್ಕಲಿ ಅಥವಾ ಒಂದು ಬೀದಿ ನಾಯಿಗೆ ಗುಂಡಿಕ್ಕಲಿ- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿಗೇಕೆ ಚಿಂತೆ ?" ಎಂದು ನನ್ನ ಭಾಷಣದಲ್ಲಿ ಬಹುಸಂಖ್ಯೆಯ ಪ್ರತಿನಿಧಿಗಳ ಭಾರೀ ಕರತಾಡನದ ನಡುವೆ ಪ್ರಶ್ನಿಸಿದೆ. ಯೂಸುಫ್ ಮೆಹರ್ ಅಲಿ, ಎಚ್. ಡಿ. ರಾಜಾ, ಇಫ್ತಿಕಾರ್ ಅಹ್ಮದ್ ಮತ್ತಿತರರು ನನಗೆ ಬೆಂಬಲವಿತ್ತರು.

ಚರ್ಚೆಗೆ ಉತ್ತರವಿತ್ತ ಗಾಂಧೀಜಿ ತನ್ನ ಠರಾವನ್ನು ಭಾರೀ ಬಹುಮತದಿಂದ ಅಂಗೀಕರಿಸಬೇಕೆಂದು ಪ್ರತಿನಿಧಿಗಳಿಗೆ ಹೇಳಿದರು. ಇಲ್ಲವಾದರೆ ಕಾಂಗ್ರೆಸ್‌ಗೆ ಕಳಂಕ ತಗಲುತ್ತದೆ ಎಂದರು ಗಾಂಧೀಜಿ.

ಆದರೂ ಈ ಠರಾವು ಅತೀ ಕಮ್ಮಿ ಬಹುಮತದೊಂದಿಗಷ್ಟೆ ಅಂಗೀಕೃತವಾಯಿತು.

ಕನಿಷ್ಟ ಈಗಲಾದರೂ ಕಾಂಗ್ರೆಸ್ ನಾಯಕರು ಭಗತ್‌ಸಿಂಗ್ ಮತ್ತು ಇತರರನ್ನು ಜನತೆಗೆ ಸ್ಫೂರ್ತಿ ನೀಡಿದ ದೇಶಪ್ರೇಮಿಗಳೆಂದು ಮಾನ್ಯ ಮಾಡಿದರಲ್ಲಾ- ನನಗೆ ಇದರಿಂದ ಸಂತೋಷವಾಗಿದೆ.

ಬಂದರು ಮುಷ್ಕರ - ಅಂತರ್‌ರಾಷ್ಟ್ರೀಯದ ಬೆಂಬಲ

ಅನಿರ್ದಿಷ್ಟ ಕಾಲದ ಮುಷ್ಕರದಲ್ಲಿ ನಿರತರಾಗಿರುವ ಭಾರತದ ಬಂದರು ಮತ್ತು ಬಂದರುಕಟ್ಟೆ ಕಾರ್ಮಿಕರಿಗೆ ಬೆಂಬಲ ನೀಡಿ ಬುಡಾಪೆಸ್ಟಿನಲ್ಲಿರುವ ಸಾರಿಗೆ ಕಾರ್ಮಿಕರ ಅಂತರ್‌ರಾಷ್ಟ್ರೀಯ ಸಂಘ ಸಿಐಟಿಯು ಗೆ ಈ ಕೆಳಗಿನ ಕೇಬಲ್ ಕಳಿಸಿದೆ–

"71 ದೇಶಗಳ ಬಂದರು, ಬಂದರು ಕಟ್ಟೆ, ರೈಲು, ಸಮುದ್ರ ಸಾರಿಗೆ, ರಸ್ತೆ ಹಾಗೂ ವಿಮಾನ ಸಾರಿಗೆಯಲ್ಲಿ 1 ಕೋಟಿ 80 ಲಕ್ಷ ಸದಸ್ಯರನ್ನು ಪ್ರತಿನಿಧಿಸುವ ಸಾರಿಗೆ ಕಾರ್ಮಿಕರ ಅಂತರ್‌ರಾಷ್ಟ್ರೀಯ ಸಂಘ ಭಾರತೀಯ ಬಂದರು-ಬಂದರುಕಟ್ಟೆ ಕಾರ್ಮಿಕರ ಸಂಯುಕ್ತ ಹೋರಾಟವನ್ನು ಅಭಿನಂದಿಸುತ್ತದೆ. ಮಾತುಕತೆಯ ಮೂಲಕ ಇತ್ಯರ್ಥಕ್ಕೆ ಬರಬೇಕೆಂದು ಭಾರತ ಸರಕಾರಕ್ಕೆ ನಮ್ಮ ಅಂತರ್‌ರಾಷ್ಟ್ರೀಯ ಸಂಘ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತದೆ; ಸರಕಾರ ದಮನಕಾರಿ ಕ್ರಮ ಕೈಗೊಂಡರೆ, ಹಡಗುಗಳಿಗೆ ಸಾಮಾನು ತುಂಬಿಸುವ, ಇಳಿಸುವ ಸಾಮಾನ್ಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸೇನೆಯನ್ನು, ನೌಕಾಪಡೆಯನ್ನು ಉಪಯೋಗಿಸಿದರೆ, ನಮ್ಮ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘ ಇತರ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘಗಳ ಸಹಕಾರದೊಂದಿಗೆ ಜಗತ್ತಿನಾದ್ಯಂತ ಭಾರತೀಯ ಹಡಗುಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸುವ ಕರೆ ಕೊಡಬೇಕಾಗಿ ಬರುತ್ತದೆ. ಇದನ್ನು ಪತ್ರಿಕೆಗಳಿಗೆ ತಿಳಿಸಬಹುದು."

ಪಂಜಾಬ್

ರಾಜಕೀಯದಲ್ಲಿ ಕೋಮುವಾದ ಹರಡುವುದನ್ನು ನಿಲ್ಲಿಸಿ

— ಪಾಲಿಟ್‌ಬ್ಯೂರೋ ಮನವಿ

ಪಂಜಾಬ್‌ನ ಪ್ರಸಕ್ತ ಪರಿಸ್ಥಿತಿಯ ಬಗ್ಗೆ ಏಪ್ರಿಲ್ 3 ರಂದು ಸಿಪಿಐ (ಎಂ) ನ ಪಾಲಿಟ್‌ಬ್ಯೂರೋ ಪತ್ರಿಕಾ ಹೇಳಿಕೆಯೊಂದನ್ನು ನೀಡಿತ್ತು. ಅದೇ ದಿನ ನಾಮಕರಣ ಸಂಸತ್ ಸದಸ್ಯ ಡಾ. ತಿವಾರಿಯವರದ್ದು ಸೇರಿದಂತೆ ಮೂರು ರಾಜಕೀಯ ಕೊಲೆಗಳು ಪಂಜಾಬಿನಲ್ಲಿ ನಡೆದವು. ಈ ಬಗ್ಗೆ ಏಪ್ರಿಲ್ 4 ರಂದು ಪಾಲಿಟ್‌ಬ್ಯೂರೋ ಇನ್ನೊಂದು ಪತ್ರಿಕಾ ಹೇಳಿಕೆಯನ್ನು ನೀಡಿತು. ಇವೆರಡನ್ನೂ ಇಲ್ಲಿ ಕೊಡಲಾಗಿದೆ –

ಸಮಸ್ತ ಪಂಜಾಬಿನ ಜನತೆಯ ಮತ್ತು ಭಾರತೀಯ ಜನತೆಯ ಹಲವು ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ಹೋರಾಡುತ್ತಿರುವ ಅಕಾಲಿ ದಳ ಈ ಬೇಡಿಕೆಗಳನ್ನು ಧಾರ್ಮಿಕ ಬೇಡಿಕೆಗಳೊಂದಿಗೆ ಬೆರೆಸುವುದು ತಪ್ಪು ಎಂದು ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷ ಸದಾ ಪರಿಗಣಿಸಿದೆ. ಇದು ಒಂದೆಡೆ ವಿಚ್ಛಿದ್ರಕಾರಿ ಶಕ್ತಿಗಳಿಗೆ ಕೋಮುವಾದವನ್ನು ಉಲ್ಬಣಗೊಳಿಸಲು ಮತ್ತು ವಾತಾವರಣವನ್ನು ಕೆಡಿಸಲು ನೆರವಾದರೆ, ಇನ್ನೊಂದೆಡೆ ಸಮಸ್ತ ಜನತೆಯ ಪ್ರಜಾಸತ್ತಾತ್ಮಕ ಬೇಡಿಕೆಗಳ ವಿರುದ್ಧ ನಿಲ್ಲಲು ಸರಕಾರಕ್ಕೆ ಅವಕಾಶ ನೀಡುತ್ತದೆ.

ಸಂವಿಧಾನದ 25 ನೇ ಕಲಮನು ತಿದ್ದುಪಡಿ ಗೊಳಿಸುವ ಪ್ರಶ್ನೆಯಲ್ಲಿ ಈ ಸಂಗತಿ ಪುನರಾವರ್ತನೆಗೊಂಡಿದೆ. ಸಿಪಿಐ (ಎಂ) ಮತ್ತು ಇತರ ಜಾತ್ಯತೀತ ಪ್ರಜಾಪ್ರಭುತ್ವ ಶಕ್ತಿಗಳು ಅಕಾಲಿ ದಳ ಸಂವಿಧಾನದ 25 ನೇ ಕಲಮನ್ನು ಸುಡಲು ಮತ್ತು ಪಂಥ ಸಪ್ತಾಹ ಆಚರಿಸಲು ನಿರ್ಧರಿಸುವುದು ತತ್ವಶಃ ತಪ್ಪು ಮತ್ತು ಕಾರ್ಯತಃ ಅವಿವೇಕತನ ಎಂದು ಭಾವಿಸುತ್ತದೆ. ಆದರೆ ಸರಕಾರ ತನ್ನ ಹಿಂದಿನ ತಂತ್ರವನ್ನೇ ಬಳಸಿ 25ನೇ ಕಲಮು ಕುರಿತಾದ ಅಕಾಲಿಗಳ ಧಾರ್ಮಿಕ ಬೇಡಿಕೆಯನ್ನು ಒಪ್ಪಿಕೊಂಡು ಚಂಡೀಘಡ ಹಾಗೂ ಸಂಬಂಧಿತ ಗಡಿ ಪ್ರಶ್ನೆಗಳಿಗೆ ಪ್ರಜಾಪ್ರಭುತ್ವವಾದಿ ಪರಿಹಾರವನ್ನು ನಿರಾಕರಿಸಿದೆ.

ಅಕಾಲಿ ಹಾಗೂ ಕಾಂಗ್ರೆಸ್ (ಐ) ಪಕ್ಷಗಳಲ್ಲಿನ ಜಾತ್ಯತೀತ ಪ್ರಜಾಪ್ರಭುತ್ವವಾದಿಗಳೂ ಸೇರಿದಂತೆ ಎಲ್ಲಾ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳು ರಾಜಕೀಯದಲ್ಲಿ ಕೋಮುವಾದ ಹರಡ್ಡುವುದನ್ನು ನಿಲ್ಲಿಸಲು ಅಕಾಲಿ ನಾಯಕತ್ವದ ಮೇಲೆ ಮತ್ತು ತನ್ನ ಉದ್ದೇಶಪೂರ್ವಕ ನಿರಾಸಕ್ತಿಯ ಧೋರಣೆಯನ್ನು ಬಿಟ್ಟು ಚಂಡೀಘಡ ಮತ್ತು ಇತರ ಗಡಿ ಪ್ರಶ್ನೆಗಳ ಪ್ರಜಾಪ್ರಭುತ್ವವಾದಿ ಬೇಡಿಕೆಗಳನ್ನು ಈಡೇರಿಸುವಂತೆ ಕಾಂಗ್ರೆಸ್ (ಐ) ನಾಯಕತ್ವದ ಮೇಲೆ ಒತ್ತಾಯ ತರಬೇಕೆಂದು ಪಾಲಿಟ್‌ಬ್ಯೂರೋ ವಿನಂತಿಸಿಕೊಳ್ಳುತ್ತದೆ.

(ಏಪ್ರಿಲ್ 3, 1984)

ಪಂಜಾಬಿನಲ್ಲಿ ಕಾಣಬರುತ್ತಿರುವ ಗಂಭೀರ ಬೆಳವಣಿಗೆಗಳ ಬಗ್ಗೆ ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸುವಲ್ಲಿ ಸಿಪಿಐ (ಎಂ) ನ ಪಾಲಿಟ್‌ಬ್ಯೂರೋ ಇತರ ಎಲ್ಲಾ ಪ್ರಜಾಪ್ರಭುತ್ವವಾದಿ ಪಕ್ಷಗಳು, ಸಂಘಟನೆಗಳು ಮತ್ತು ವ್ಯಕ್ತಿಗಳ ಜತೆಗೂಡುತ್ತದೆ. ರಾಜ್ಯಸಭಾ ಸದಸ್ಯ ವಿ. ಎನ್. ತಿವಾರಿಯವರ ಕೊಲೆಯೂ ಸೇರಿದಂತೆ ರಾಜಕೀಯ ಕೊಲೆಗಳ ಒಂದು ಸರಣಿ ಮತ್ತು ಇನ್ನೂ ಹತ್ತು ಜನರ ಪ್ರಾಣ ಬಲಿ ಪಡೆದ ತಿಕ್ಕಾಟದ ನಿನ್ನೆಯ ಘಟನೆಗಳು ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿರುವುದನ್ನು ತೋರಿಸುತ್ತದೆ. ಸರಕಾರ, ಅಕಾಲಿಗಳು ಹಾಗೂ ಇತರ ಹಲವು ಪಕ್ಷಗಳು ಮತ್ತು ಸಂಘಟನೆಗಳ ನಾಯಕತ್ವ ಒಂದು ಕೋಮನ್ನು ಇನ್ನೊಂದು ಕೋಮಿನ ವಿರುದ್ಧ ಎತ್ತಿ ಕಟ್ಟುವ ಅಪಾಯಕಾರೀ ಆಟದಲ್ಲಿ ತೊಡಗಿದ್ದಾರೆ. ರಾಜ್ಯದಲ್ಲಿ ಸ್ಥಿತಿಯನ್ನು ಸಾಮಾನ್ಯಗೊಳಿಸುವ ವಿಷಯಕ್ಕೆ ಇತರೆಲ್ಲಾ ವಿಷಯಗಳಿಗಿಂತಲೂ ಹೆಚ್ಚಿನ ಆದ್ಯತೆ ನೀಡುವುದು ಅಗತ್ಯ ಎಂದು ಸಂಬಂಧಪಟ್ಟ ಪ್ರತಿಯೊಬ್ಬರಲ್ಲೂ ಪಾಲಿಟ್‌ಬ್ಯೂರೋ ಮನವಿಮಾಡಿಕೊಳ್ಳುತ್ತದೆ.

ಕಾಂಗ್ರೆಸ್ (ಐ)ನ ಮತ್ತು ಕೇಂದ್ರ ಸರಕಾರದ ನಾಯಕರು ತಮ್ಮ ಉದ್ದೇಶಪೂರ್ವಕ ನಿರಾಸಕ್ತಿಯ ಧೋರಣೆಗಳು ಪಂಜಾಬ್ ರಾಜ್ಯ ಹಾಗೂ ಸಮಪ್ರದೇಶವನ್ನು ಎಷ್ಟು ಆಳವಾದ ಬಿಕ್ಕಟ್ಟಿನಲ್ಲಿ ತಂದು ನಿಲ್ಲಿಸಿದೆ ಎಂಬುದನ್ನು ಇನ್ನೂ ಅರಿತಿಲ್ಲವೆಂದು ಗಮನಿಸಲು ಪಾಲಿಟ್‌ಬ್ಯೂರೋ ವಿಷಾದಿಸುತ್ತದೆ.

ಆರು ತಿಂಗಳ ಹಿಂದೆ ಆಗಿನ ರಾಜ್ಯ ಸರಕಾರ ಕಾನೂನು, ವ್ಯವಸ್ಥೆ ನೋಡಿಕೊಳ್ಳುವಲ್ಲಿ ವಿಫಲವಾಗಿದೆ ಎಂದು ಘೋಷಿಸಿ ಕೇಂದ್ರ ಸರಕಾರ ತಾನೇ ರಾಜ್ಯದ ಆಡಳಿತವನ್ನು ವಹಿಸಿಕೊಂಡಿತು. ಆದರೆ ಕೇವಲ ಕಾನೂನು ಮತ್ತು ವ್ಯವಸ್ಥೆಯ ಸ್ಥಾಪನೆಯನ್ನಷ್ಟೇ ಅವಲಂಬಿಸಿಕೊಂಡಿದ್ದು ಪಂಜಾಬಿನ ಸಮಸ್ಯೆಯನ್ನು ಪರಿಹರಿಸುವುದು ಸಾಧ್ಯವಿಲ್ಲವೆಂಬುದನ್ನು ಕಳೆದ ಆರು ತಿಂಗಳ ಘಟನೆಗಳು ತೋರಿಸಿಕೊಟ್ಟಿವೆ. ಭಯೋತ್ಪಾದಕ ಮತ್ತು ಕೊಲೆಪಾತಕ ಕೃತ್ಯಗಳನ್ನು ನಡೆಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ಅಗತ್ಯವೇನೋ ಹೌದು. ಆದರೆ ಈ ಆಡಳಿತಾತ್ಮಕ ಕ್ರಮಗಳಿಗೆ ಪೂರಕವಾಗಿ ತೀವ್ರಗಾಮಿಗಳನ್ನು ಜನರಿಂದ ಪ್ರತ್ಯೇಕಗೊಳಿಸುವ ರಾಜಕೀಯ ಕ್ರಮಗಳನ್ನೂ ಕೈಗೊಳ್ಳಬೇಕು.

ರಾಜ್ಯವನ್ನು "ಅಪಾಯಕಾರೀ ಗಲಭೆಪೀಡಿತ ಪ್ರದೇಶ" ಎಂದು ಘೋಷಿಸಬೇಕಾದ ಪರಿಸ್ಥಿತಿಯುಂಟು ಮಾಡಿದ ಭಯಾನಕ ಘಟನೆಗಳ ನಂತರವೂ ಸರಕಾರ ವಿವೇಕದಿಂದ ವರ್ತಿಸದೆ ಪರಿಸ್ಥಿತಿಯನ್ನು ಅದರಷ್ಟಕ್ಕೇ ಸಾಗಲು ಬಿಟ್ಟಿರುವುದಕ್ಕೆ ಪಾಲಿಟ್‌ಬ್ಯೂರೋಗೆ ವಿಷಾದವಾಗಿದೆ. ಚಂಡೀಘಡದ ಬಗ್ಗೆ ಪಂಜಾಬಿನ ಬೇಡಿಕೆಯನ್ನು ಒಪ್ಪಿಕೊಂಡ ಇತರ ಗಡಿ ಪ್ರಶ್ನೆಗಳನ್ನು ಪಂಜಾಬ್ ಹಾಗೂ ಹರಿಯಾಣಾದ ನಾಯಕರ ನಡುವೆ ಮಾತುಕತೆಗಳ ಮೂಲಕ ಪರಿಹರಿಸಲು ಸರಕಾರ ನಿರಾಕರಿಸುತ್ತಿರುವುದು ತೀವ್ರಗಾಮಿಗಳನ್ನು ಜನರಿಂದ ದೂರಗೊಳಿಸುವಲ್ಲಿ ಅಡ್ಡಿಯಾಗುತ್ತಿರು ಮಾತ್ರ ಅಂಶ.

ಬೆಳೆದು ಬರುತ್ತಿರುವ ಆತಂಕಕಾರಿ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ, ರಾಜಕೀಯದಲ್ಲಿ ಕೋಮುವಾದವನ್ನು ಹರಡುವ ಆತ್ಮಹತ್ಯಾಕಾರೀ ಹಾದಿಯನ್ನು ತ್ಯಜಿಸಬೇಕೆಂದು ಪಾಲಿಟ್‌ಬ್ಯೂರೋ ಅಕಾಲಿ ನಾಯಕತ್ವಕ್ಕೆ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತದೆ, ಈ ಹಾದಿ ಪಂಜಾಬಿನ ಮತ್ತು ಸಮಸ್ತ ದೇಶದ ಜನತೆಗೆ ತುಂಬಾ ಕೇಡುಕನ್ನುಂಟು ಮಾಡಿದೆ. ಅಕಾಲಿ ಪಕ್ಷದ ಪ್ರಬಲ ನಾಯಕತ್ವ ತೀವ್ರಗಾಮಿಗಳ ವಿರುದ್ಧ ಸಕ್ರಿಯ ಹೋರಾಟ ನಡೆಸಬೇಕು ಮತ್ತು ಪಂಜಾಬಿನಲ್ಲಿ ಕೋಮು ಸೌಹಾರ್ದವನ್ನು ಮತ್ತೆ ನೆಲೆಗೊಳಿಸಬೇಕೆಂದು ನಾವು ಕಳಕಳಿಯಿಂದ ಒತ್ತಾಯಿಸುತ್ತೇನೆ.

(ಏಪ್ರಿಲ್ 4, 1984)

ಪಶ್ಚಿಮ ಬಂಗಾಳ

ಶಿಕ್ಷಣಕ್ಷೇತ್ರದ ಪ್ರಜಾಪ್ರಭುತ್ವೀಕರಣದಲ್ಲಿ ಇನ್ನೊಂದು ಪ್ರಮುಖ ಹೆಜ್ಜೆ

1979 ರ ಕಲ್ಕತ್ತಾ ವಿಶ್ವವಿದ್ಯಾಲಯ ಶಾಸನ ಶಿಕ್ಷಣ ಕ್ಷೇತ್ರದಲ್ಲಿ ಎಡರಂಗದ ಒಂದು ಪ್ರಮುಖ ಸಾಧನೆಯಾಗಿತ್ತು. ಅದುವರೆಗೆ ಆ ವಿಶ್ವವಿದ್ಯಾನಿಲಯದ ಸೆನೇಟ್ ಹಾಗೂ ಸಿಂಡಿಕೇಟ್‌ನ ಪ್ರತೀ ಐವರು ಸದಸ್ಯರಲ್ಲಿ ಒಬ್ಬರಷ್ಟೇ ಚುನಾಯಿತ ಪ್ರತಿನಿಧಿಯಾಗಿದ್ದರು ಉಳಿದವರೆಲ್ಲಾ ನಾಮಕರಣ ಹೊಂದಿದವರು. ಅಂದರೆ ಅದುವರೆಗೆ ಸೆನೇಟ್, ಸಿಂಡಿಕೇಟ್‌ಗಳು ಸಮಾಜದ ಪ್ರಭೃತಿಗಳ ದಿವಾನ ಖಾನೆಗಳಾಗಿದ್ದವು, ಪಟ್ಟಭದ್ರ ಹಿತಾಸಕ್ತಿಗಳ ಕೋಟೆಗಳಾಗಿದ್ದವು ಅವು. 1979 ರ ಶಾಸನ ಮೊತ್ತಮೊದಲ ಬಾರಿಗೆ ವಿಶ್ವವಿದ್ಯಾಲಯದ ಆಡಳಿತದಲ್ಲಿ ಅಧ್ಯಾಪಕ ಪ್ರಿನ್ಸಿಪಾಲರುಗಳು, ವಿದ್ಯಾರ್ಥಿಗಳು, ನೋಂದಾಯಿತ ಸ್ನಾತಕರು ಹಾಗೂ ಶಿಕ್ಷಣ ವ್ಯವಸ್ಥೆಗೆ ಸಂಬಂಧಪಟ್ಟ ಇತರ ಜನವಿಭಾಗಗಳೆಲ್ಲದಕ್ಕೂ ಪ್ರಾತಿನಿಧ್ಯದ ಅವಕಾಶ ಮಾಡಿಕೊಟ್ಟಿತು ಈಗ ಈ ಆಡಳಿತ ಮಂಡಳಿಗಳ ಐವರಲ್ಲಿ ನಾಲ್ವರು ಚುನಾಯಿತ ಪ್ರತಿನಿಧಿಗಳು. ಶಿಕ್ಷಣ ಕ್ಷೇತ್ರದ ಪ್ರಜಾಪ್ರಭುತ್ವೀಕರಣದಲ್ಲಿ ದೇಶದಲ್ಲೇ ಪ್ರಮುಖ ಪ್ರಯತ್ನವಾಗಿತ್ತದು.

ತಮ್ಮ ಭದ್ರ ಕೋಟೆಯಲ್ಲಿ ಪ್ರಜಾಪ್ರಭುತ್ವದ ತಂಗಾಳಿ ಬೀಸಲಾರಂಭಿಸಿದ್ದು ಪ್ರತಿಕ್ರಿಯಾ ವಾದೀ ಶಕ್ತಿಗಳಿಗೆ ಸ್ವಾಭಾವಿಕವಾಗಿಯೇ ಹಿಡಿಸಲಿಲ್ಲ. ಕಲ್ಕತ್ತಾ ವಿಶ್ವವಿದ್ಯಾಲಯದ ಚುನಾವಣೆಗಳಲ್ಲಿ ಪ್ರಜಾಪ್ರಭುತ್ವವಾದೀ ಶಕ್ತಿಗಳ ವಿಜಯದ ನಂತರ ಈ ಪ್ರತಿಕ್ರಿಯವಾದಿಗಳು ಹೊಸದೊಂದು ಸಂಚು ಹೂಡುತ್ತಿರುವಂತೆ ಕಾಣುತ್ತಿದೆ. ಸೆನೆಟ್‌ನ ಬಹುಮತದ ಅಭಿಲಾಷೆಯ ವಿರುದ್ಧ ತನ್ನದೇ ಆದ ಉಪಕುಲಪತಿಯನ್ನು ರಾಜ್ಯಪಾಲ ಎ. ಪಿ. ಶರ್ಮಾ ನೇಮಕ ಮಾಡಿದ್ದು ಇದರ ಒಂದು ಭಾಗ. ಆ ಮೇಲೆ ಉಪಕುಲಪತಿಗಳ ಕಾರ್ಯಶೈಲಿ ಇದನ್ನೂ ಸಾಬೀತುಗೊಳಿಸುತ್ತಿದೆ. ಉಪಕುಲ ಪತಿಗಳು ಹಾಗೂ ರಾಜ್ಯಪಾಲರು ಸೇರಿಕೊಂಡು ಸಿಂಡಿಕೇಟ್ ಹಾಗೂ ಸೆನೇಟುಗಳ ಅಭಿಪ್ರಾಯಗಳನ್ನು ಲೆಕ್ಕಿಸದೆ ವಿಶ್ವವಿದ್ಯಾಲಯದಲ್ಲಿ ತಮ್ಮ ಮನ ಬಂದಂತೆ ಆಡಳಿತ ನಡೆಸಲಾರಂಭಿಸಿದರು. ಒಂದು ಸೀಮಿತ ಕೂಟದ ಪ್ರಜಾಪ್ರಭುತ್ವ ವಿರೋಧಿ ಕಾರ್ಯಶೈಲಿ ಮತ್ತೆ ಕಂಡುಬರಲಾರಂಭಿಸಿತು ವಾಸ್ತವವಾಗಿ 1979 ರ ಶಾಸನ ವಿಶ್ವವಿದ್ಯಾಲಯ ಆಡಳಿತದಲ್ಲಿ ನಡೆದು ಬಂದ ಕೆಲವು ಸತ್ಸಂಪ್ರದಾಯಗಳ ಮೇಲೆ ನಿಂತಿತ್ತು. ಆದರೆ ಶಿಕ್ಷಣ ಕ್ಷೇತ್ರದ ಪ್ರತಿಕ್ರಿಯಾವಾದಿಗಳು ಈ ಸತ್ಸಂಪ್ರದಾಯಗಳನ್ನೇ ಮುರಿದು ತಮ್ಮ ದುರುದ್ದೇಶ ಸಾಧಿಸಲು ಪ್ರಯತ್ನಿಸುತ್ತಿರುವುದು ಕಂಡುಬಂತು

ಅದ್ದರಿಂದ 1979 ರ ಈ ಶಾಸನದ ಸತ್ತ್ವವನ್ನು ಕಾಪಾಡುವುದಕ್ಕಾಗಿ ಈಗ ವಿಧಾನ ಸಭೆಯೆದುರು ಎಡರಂಗ ಸರ್ಕಾರ ಕಲ್ಕತ್ತಾ ವಿಶ್ವವಿದ್ಯಾಲಯ ತಿದ್ದುಪಡಿ (1984) ಮಸೂದೆಯನ್ನು ಮಂಡಿಸಿದೆ. ವಿಶ್ವವಿದ್ಯಾಲಯದ ಆಡಳಿತದ ಕೆಲವು ಸತ್ಸಂಪ್ರದಾಯಗಳಿಗೆ ಕಾನೂನಿನ ಸ್ಥಾನ ಮಾನ ಕೊಟ್ಟು ಶಿಕ್ಷಣ ಕ್ಷೇತ್ರದ ಪ್ರಜಾಪ್ರಭುತ್ವೀಕರಣವನ್ನು ಸುಭದ್ರಗೊಳಿಸುವುದು ಈ ಮಸೂದೆಯ ಉದ್ದೇಶ. ಉಪಕುಲಪತಿಯ ನೇಮಕದಲ್ಲಿ ಸದ್ಯ ರಾಜ್ಯಪಾಲರಿಗೂ, ಉಚ್ಚ ಶಿಕ್ಷಣ ಮಂತ್ರಿಯವರಿಗೂ ಇರುವ ಪಾತ್ರವನ್ನು ಬದಿಗೊತ್ತಿ, ಸೆನೇಟ್‌ಗೆ ಉಪಕುಲಪತಿಯನ್ನು ಪ್ರಜಾಸತ್ತಾತ್ಮಕವಾಗಿ ಚುನಾಯಿಸುವ ಅಂತಿಮ ಅಧಿಕಾರ ನೀಡುವುದು ಹಾಗೂ ಎರಡನೆಯದಾಗಿ, ಉಪಕುಲಪತಿಗಳ ತುರ್ತು ಕ್ರಮಗಳಿಗೆ ಸಿಂಡಿಕೇಟ್ ಸಮ್ಮತಿ ಸೂಚಿಸದೇ ಹೋದಾಗ ಅಂತಿಮ ನಿರ್ಧಾರ ರಾಜ್ಯಪಾಲರ ವ್ಯಾಪ್ತಿಯೊಳಗಿರುವ ಸದ್ಯದ ಅವಕಾಶವನ್ನು ಬದಲಿಸಿ ವಿಶ್ವವಿದ್ಯಾಲಯದ ಅತ್ಯುಚ್ಛ ಪ್ರಾತಿನಿಧಿಕ ಸಭೆಯಾದ ಸೆನೇಟ್‌ಗೆ ಆ ಬಗ್ಗೆ ಅಂತಿಮ ಅಧಿಕಾರ ನೀಡುವುದು. ಹೀಗೆ

(7ನೇ ಪುಟ ನೋಡಿ)

ಡಿ. ವೈ. ಎಫ್. ಐ. ಸಪ್ತಾಹ

ಮೈಸೂರು

25.3.1984 ರಂದು ಮೈಸೂರಿನ ವಿನಾಯಕ ನಗರದಲ್ಲಿ ಡಿ. ವೈ. ಎಫ್. ಐ. ಆಶ್ರಯದಲ್ಲಿ ವಿವಿಧ ವಿಚಾರಗಳ ಬಗ್ಗೆ ವಿಚಾರಗೋಷ್ಠಿ ನಡೆಸಲಾಯಿತು. ನಿರುದ್ಯೋಗ ವಿರೋಧಿ ದಿನಾಚರಣೆಯನ್ನು ರಾಜ್ಯದಾದ್ಯಂತ ಆಚರಿಸಲು ಕರೆನೀಡಲಾಗಿದ್ದ ಭಾಗವಾಗಿ, ಈ ಕಾರ್ಯಕ್ರಮ ಸಂಘಟಿಸಲಾಗಿತ್ತು. ನಿರುದ್ಯೋಗ ಸಮಸ್ಯೆ, ರಾಷ್ಟ್ರೀಯ ಐಕ್ಯತೆ, ಜಾಗತಿಕ ಶಾಂತಿ ಇವೇ ಮೊದಲಾದ ವಿಷಯಗಳ ಬಗ್ಗೆ ವಿಚಾರ ಮಂಡಿಸಲಾಗಿತ್ತು. ಈ ಪ್ರದೇಶದ ಜನರಿಗೆ ಇದೇ ಮೊದಲ ಬಾರಿಗೆ ಇಂತಹ ಕಾರ್ಯಕ್ರಮ ಪರಿಚಯಿಸಲ್ಪಟ್ಟಿದ್ದು ಉತ್ಸಾಹದಿಂದ ಯುವಕರು ಭಾಗವಹಿಸಿದ್ದರು.

ರಾಜ್ಯ ಎಸ್. ಎಫ್. ಐ. ಅಧ್ಯಕ್ಷರಾದ ಆರ್. ಜಯಕುಮಾರ್, ಸ್ಥಳೀಯ ಮಹಾಜನ ಕಾಲೇಜಿನ ಅಧ್ಯಾಪಕರಾದ ಮಾಧವ ಕುಲಕರ್ಣಿ, ಸ್ಥಳೀಯ ಡಿ. ವೈ. ಎಫ್. ಐ. ಸಕ್ರಿಯ ಕಾರ್ಯಕರ್ತ ಡಿ. ವೆಂಕಟೇಶ್ ಮೊದಲಾದವರು ವಿಚಾರಗೋಷ್ಠಿಯಲ್ಲಿ ಮಾತನಾಡಿದರು. ರಾಜ್ಯ ಡಿ. ವೈ. ಎಫ್. ಐ. ಸಹಕಾರ್ಯದರ್ಶಿ ಜಿ. ಜಯರಾಮು ರವರು ಗೋಷ್ಠಿಯ ಅಧ್ಯಕ್ಷತೆ ವಹಿಸಿದರು. ಮೊದಲಿಗೆ ಮರಿಸ್ವಾಮಿ ಸ್ವಾಗತಿಸಿದರು.

ಗಾಂಧಿ ನಗರದಲ್ಲಿ ಸಭೆ

23.3.1984 ರಂದು ಮೈಸೂರಿನ ಗಾಂಧಿನಗರದಲ್ಲಿ ಡಿ. ವೈ. ಎಫ್. ಐ. ಕರೆ ನೀಡಿದ್ದ ನಿರುದ್ಯೋಗ ವಿರೋಧಿ ದಿನಾಚರಣೆಯ ಅಂಗವಾಗಿ ಯುವಕರ ಸಭೆ ನಡೆಯಿತು. ಸಭೆಯಲ್ಲಿ ಆರ್. ಜಯಕುಮಾರ್, ಬಿ. ಅಣ್ಣಪ್ಪ ಜಾರ್ಜ್ ರವರುಗಳು ಮಾತನಾಡಿದರು. ಜಿಲ್ಲಾ ಡಿ. ವೈ. ಎಫ್ ಐ. ಉಪಾಧ್ಯಕ್ಷರಾದ ಮಂಜುನಾಥಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

ಸೈಕಲ್ ಮೆರವಣಿಗೆ

ರಾಜ್ಯ ಸಮಿತಿಯ ಕರೆಯ ಮೇರೆಗೆ ಡಿ. ವೈ. ಎಫ್. ಐ. ಮೈಸೂರು ನಗರ ಘಟಕವು ಮಾರ್ಚ್ 28 ರಂದು ನಿರುದ್ಯೋಗ ವಿರೋಧಿ ದಿನಾಚರಣೆಯ ಅಂಗವಾಗಿ ನಗರದ ಮುಖ್ಯ ಬೀದಿಗಳಲ್ಲಿ ಯುವ ಜನರ ಸೈಕಲ್ ಮೆರವಣಿಗೆ ನಡೆಸಿ, ಹಲವಾರು ಬೇಡಿಕೆಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು. ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆ, ನಿರುದ್ಯೋಗ ಭತ್ಯೆ, ವರದಕ್ಷಿಣೆ ನಿಷೇಧಿಸಲು ಉಗ್ರ ಕಾನೂನಿನ ಕ್ರಮ ಇವೇ ಮೊದಲಾದ ಮುಖ್ಯ ಬೇಡಿಕೆಗಳನ್ನು ರಾಜ್ಯದ ಮುಖ್ಯ ಮಂತ್ರಿಗಳಿಗೆ ಸಲ್ಲಿಸಲಾದ ಮನವಿಪತ್ರದಲ್ಲಿ ಒತ್ತಾಯಿಸಲಾಗಿತ್ತು. ರಾಜ್ಯ ಡಿ. ವೈ. ಎಫ್. ಐ. ಸಹ ಕಾರ್ಯದರ್ಶಿ ಜಿ. ಜಯರಾಮು ರವರು ಸೈಕಲ್ ಮೆರವಣಿಗೆಯ ಮುಖಂಡತ್ವ ವಹಿಸಿದ್ದರು.

ಬಳ್ಳಾರಿ ಜಿಲ್ಲೆ

ಡಿ.ವೈ.ಎಫ್.ಐ. ಕರ್ನಾಟಕ ರಾಜ್ಯ ಸಮಿತಿಯ ಕರೆಯಂತೆ ಮಾರ್ಚ್ 23 ರಿಂದ 28ರವರೆಗೆ ಬಳ್ಳಾರಿ ಜಿಲ್ಲೆಯಲ್ಲಿ ಡಿ. ವೈ.ಎಫ್.ಐ. ಸಪ್ತಾಹ ಆಚರಣೆ ನಡೆಸಿತು.

23.3.84 ರಂದು ಭಗತ್ ಸಿಂಗ್ ಹುತಾತ್ಮ ದಿನಾಚರಣೆ ಬಳ್ಳಾರಿ ಮತ್ತು ಮಲಪನಗುಡಿಗಳಲ್ಲಿ ನಡೆಯಿತು

24.3.84 ರಂದು "ಜಾಗತಿಕ ಶಾಂತಿ ದಿನಾಚರಣೆ" ತೋರಣಗಲ್‌ನಲ್ಲಿ ನಡೆಯಿತು.

25.3.84 ರಂದು "ರಾಷ್ಟ್ರೀಯ ಐಕ್ಯತಾ ದಿನಾಚರಣೆ" ಮರಿಯಮ್ಮನ ಹಳ್ಳಿಯಲ್ಲಿ ನಡೆಯಿತು.

26.3.84 ರಂದು "ಪಕ್ಷಾಂತರ ವಿರೋಧಿ ದಿನಾಚರಣೆ" ಹೊಸಪೇಟೆಯ ಉಕ್ಕಡ ಕೇರಿಯಲ್ಲಿ ನಡೆಯಿತು.

27.3.84 ರಂದು "ಬೆಲೆ ಏರಿಕೆ ವಿರೋಧಿ ದಿನಾಚರಣೆ" ಅನಂತಶಯನ ಗುಡಿಯಲ್ಲಿ ನಡೆಯಿತು.

28.3.84 ರಂದು ನಿರುದ್ಯೋಗ ವಿರೋಧಿ ದಿನಾಚರಣೆಯ ಅಂಗವಾಗಿ ಗ್ರಾಮಾಂತರ ಪ್ರದೇಶಗಳಿಂದ ತಾಲ್ಲೂಕು ಕೇಂದ್ರಗಳಿಗೆ ಸೈಕಲ್ ಜಾಥಾ ನಡೆಯಿತು.

ಈ ಮೇಲಿನ ಕಾರ್ಯಕ್ರಮಗಳಲ್ಲಿ ಸ್ಥಳೀಯ - ಜಿಲ್ಲಾ ಮುಖಂಡರುಗಳು ಭಾಗವಹಿಸಿ ಮಾತನಾಡಿದರು. ಕಾರ್ಯಕ್ರಮಗಳಲ್ಲಿ ತರುಣರು, ಕಾರ್ಮಿಕರು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದುದಾಗಿ ವರದಿಯಾಗಿದೆ.

ಭಗತ್ ಸಿಂಗ್ ದಿನಾಚರಣೆ

ಮಾರ್ಚ್ 23 ರಂದು ಕೋಲಾರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ಭಗತ್ ಸಿಂಗ್‌ರ ಮರಣ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಣೆ ಮಾಡಲಾಯಿತು.

ಅದೇ ದಿವಸ ಕೋಲಾರ ಜಿಲ್ಲೆಯಲ್ಲಿ ಡಿ.ವೈ.ಎಫ್.ಐ.ನ ಟೆಂಪೊ ಜಾಥಾವು ಬಾಗೇಪಲ್ಲಿಯನ್ನು ತಲುಪಿತು. ಬಾಗೇಪಲ್ಲಿಯ ಪುರಭವನದಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಎಸ್. ಎಫ್. ಐ.ನ ರಾಜ್ಯ ಸಮಿತಿಯ ಉಪಾಧ್ಯಕ್ಷ ಕಾ. ರಾಜಣ್ಣನವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಬಂದಿದ್ದ ಕಾ. ಜಿ. ವಿ. ಶ್ರೀರಾಮರೆಡ್ಡಿಯವರು ಭಗತ್‌ಸಿಂಗ್‌ರನ್ನು ಆರ್.ಎಸ್.ಎಸ್. ಕಾಂಗ್ರೆಸ್ ಮತ್ತು ನಕ್ಸಲ್ ವಾದಿಗಳು ತಪ್ಪು ರೀತಿಯಲ್ಲಿ ವಿಶ್ಲೇಷಿಸಿ ಯುವ ಜನತೆಯನ್ನು ತಪ್ಪು ದಾರಿಗೆ ಎಳೆಯುತ್ತಿರುವುದನ್ನು ಖಂಡಿಸಿ, ಭಗತ್ ಸಿಂಗ್‌ನ ಸೈದ್ಧಾಂತಿಕ ಧೋರಣೆಗಳನ್ನು ಸೂಕ್ತ ರೀತಿಯಲ್ಲಿ ವಿವರಿಸಿದರು.

ಬೆಂಗಳೂರು

28.3.84 ರಂದು ಡಿ. ವೈ. ಎಫ್. ಐ. ನ ಬೆಂಗಳೂರು ಜಿಲ್ಲಾ ಸಮಿತಿಯ ಸುಮಾರು 200 ಕ್ಕೂ ಹೆಚ್ಚು ಸದಸ್ಯರು ಮತ್ತು ಹಿತೈಷಿಗಳು "ನಿರುದ್ಯೋಗ ವಿರೋಧಿ ದಿನಾಚರಣೆ"ಯ ಅಂಗವಾಗಿ ಸೈಕಲ್ ರ‍್ಯಾಲಿ ನಡೆಸಿದರು. ನಂತರ ನಡೆದ ಬಹಿರಂಗ ಸಭೆಯುನ್ನುದ್ದೇಶಿಸಿ ಕಾ. ಶ್ರೀನಿವಾಸ್ ಕಾ. ಗೋಪಾಲಕೃಷ್ಣ, ಕಾ. ಶಿವಶಂಕರ್ ಮತ್ತು ಕಾ. ವೇಣು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾ. ಜನಕರಾಜ್ ವಹಿಸಿದ್ದರು.

ಮಂಗಳೂರಿನಲ್ಲಿ ಸ್ವಾಗತ ಸಮಿತಿಯ ಸಭೆ

ಸಿ.ಐ.ಟಿ.ಯು. ನಾಲ್ಕನೇ ಸಮ್ಮೇಳನಕ್ಕಾಗಿ ರಚಿತವಾಗಿರುವ ಸ್ವಾಗತ ಸಮಿತಿಯ ಸಭೆಯು 2.4.84 ರಂದು ಮಂಗಳೂರಿನಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಿ.ಪಿ.ಐ. (ಎಂ) ಶಾಸಕರಾದ ಕಾ. ಪಿ. ರಾಮಚಂದ್ರ ರಾವ್ ವಹಿಸಿದ್ದರು. ಸಿಐಟಿಯು ಸ್ಥಾಪನೆಯಾದ ನಂತರ ಮೊದಲಬಾರಿಗೆ ಮಂಗಳೂರಿನಲ್ಲಿ ಸಮ್ಮೇಳನ ನಡೆಯಲಿದೆ. ಸಮ್ಮೇಳನದ ಸಿದ್ಧತೆ ಬಗ್ಗೆ ಎಲ್ಲಾ ತಾಲ್ಲೂಕುಗಳಲ್ಲಿ ಪ್ರಚಾರ ನಡೆಸುವ ಕುರಿತು ಚರ್ಚಿಸಲಾಗಿದೆ. ಸಭೆಯಲ್ಲಿ ಕಾ. ಬಿ ಮಾಧವ ಮತ್ತು ಕಾ. ಕೆ. ಮೂಸಬ್ಬ ಅವರುಗಳು ಮಾತನಾಡಿದರು.

ಮೇ 14 ರಂದು ಸಮ್ಮೇಳನದ ಉದ್ಘಾಟನೆಯು ಮಂಗಳೂರಿನ ಪುರಭವನದಲ್ಲಿ ನಡೆಯಲಿದೆಯೆಂದೂ ನಂತರ ಪ್ರತಿನಿಧಿಗಳ ಅಧಿವೇಶನವು ಗಣಪತಿ ಜೂನಿಯರ್ ಕಾಲೇಜಿನಲ್ಲಿ ನಡೆಯಲಿರುವುದಾಗಿ ತಿಳಿದು ಬಂದಿದೆ.

ಮೇ 17 ರಂದು ನಡೆಯುವ ಬಹಿರಂಗ ಸಭೆಗೆ ಶಿವಮೊಗ್ಗ ಜಿಲ್ಲೆ, ಹಾಸನ, ಸಕಲೇಶಪುರ,-ಚಿಕ್ಕಮಗಳೂರುಗಳಿಂದ ಬಸ್‌ಗಳಲ್ಲಿ ಸಿಐಟಿಯು ಕಾರ್ಯಕರ್ತರುಗಳು ಬರುವವರಿದ್ದಾರೆ.

(3ನೇ ಪುಟದಿಂದ)

ಹಣಕಾಸಿನ ಸಂಬಂಧಗಳು

ಹಣಕಾಸಿನ ಸಂಬಂಧಗಳನ್ನು ಒಳಗೊಂಡ ಸಂವಿಧಾನದ ಭಾಗವು ಬೇರೆ ಎಲ್ಲಕ್ಕಿಂತ ಹೆಚ್ಚಾಗಿ ಟೀಕೆಗೆ ಒಳಗಾಗಿದೆ. ಹಣಕಾಸು ಆಯೋಗಗಳಿಗೆ ಸಲ್ಲಿಸಿರುವ ಮನವಿ ಪತ್ರಗಳೇ ಇದಕ್ಕೆ ಸಾಕ್ಷಿ. ಅತಿ ಹೆಚ್ಚು ಖರ್ಚಿನ ಬಾಬುಗಳನ್ನು ಹೊಂದಿರುವ ಇಲಾಖೆಗಳು ರಾಜ್ಯ ಸರ್ಕಾರ ದೊಡನಿದ್ದರೆ ಆದಾಯ ತರುವ ಬಹುತೇಕ ಇಲಾಖೆಗಳು ಕೇಂದ್ರ ಸರ್ಕಾರದೊಡನೆ ಇವೆ. ಕೇಂದ್ರ ಸರ್ಕಾರದ ಒಟ್ಟು ಆದಾಯದ ಶೇಖಡ 75ನ್ನು ರಾಜ್ಯ ಸರ್ಕಾರಗಳಿಗೆ ನೀಡಬೇಕು. ವಿವಿಧ ರಾಜ್ಯಗಳಿಗೆ ನೀಡುವ ಹಣವನ್ನು ಹಣಕಾಸು ಆಯೋಗ ನಿರ್ಧರಿಸಬೇಕು. ಈ ನಿಟ್ಟಿನಲ್ಲಿ ಸಂವಿಧಾನದ 280 ನೇ ವಿಧಿಯ ಸಂಬಂಧಿಸಿದ ಭಾಗವನ್ನು ತೆಗೆದು ಹಾಕಬೇಕು. ಅಲ್ಲದೆ ತಮಗೆ ಸಂಬಂಧಿಸಿದ ವಿಷಯಗಳಲ್ಲಿ ತೆರಿಗೆ ಹಾಕಲು ರಾಜ್ಯಗಳಿಗೆ ಹೆಚ್ಚು ಅಧಿಕಾರ ನೀಡಬೇಕು.

ಆರ್ಥಿಕ ಮತ್ತು ಸಾಮಾಜಿಕ ಯೋಜನೆ

ಈಗಾಗಲೇ ವಿವರಿಸಿರುವಂತೆ ಯೋಜನೆ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿನ ಸಮನ್ವಯತೆಯ ಜವಾಬ್ದಾರಿ ಕೇಂದ್ರ ಸರ್ಕಾರದೊಡನಿರಬೇಕು. ಆದರೆ ಈ ಕೆಲಸವನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಮೂಲಕ ನಡೆಸಬೇಕು. ಈ ಮಂಡಳಿಯಲ್ಲಿ ಕೇಂದ್ರ ಮತ್ತು ರಾಜ್ಯಗಳಿಗೆ ಸಮಾನ ಪ್ರಾತಿನಿಧ್ಯವಿರಬೇಕು. ಪ್ರಸಕ್ತ ಬಿಕ್ಕಟ್ಟಿಗೆ ಸಂಪೂರ್ಣ ಪರಿಹಾರ ದೊರಕಬೇಕಾದರೆ ಯೋಜನೆಯ ನೀತಿಯನ್ನು ಆಮೂಲಾಗ್ರವಾಗಿ ಬದಲಾಯಿಸಬೇಕು.

ಇನ್ನಿತರ ವಿಷಯಗಳು

ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಕುರಿತಂತೆ ಕೊನೆಯಲ್ಲಿ ಮೂರು ಅಂಶಗಳನ್ನು ಎತ್ತಬೇಕಾಗಿದೆ. ಅವುಗಳೆಂದರೆ; ಆಡಳಿತದ ಭಾಷೆ, ಚುನಾವಣಾ ಪದ್ಧತಿ, ಮತ್ತು ಕಾಶ್ಮೀರ ರಾಜ್ಯದ ವಿಶೇಷ ಸ್ಥಾನ ಮಾನ.

ಆರ್ಥಿಕ- ಸಾಮಾಜಿಕ ಹಾಗೂ ಬೌದ್ಧಿಕ ಕೊಡುಕೊಳ್ಳುವಿಕೆಯು ವಿವಿಧ ರಾಜ್ಯಗಳ ಜನತೆಯ ನಡುವೆ ಬೆಳೆದು ಬಂದಂತೆ ವಾಸ್ತವದಲ್ಲಿ ಎಲ್ಲರಿಗೂ ಸೂಕ್ತವಾದ ಭಾಷೆಯೊಂದು ರೂಪಿತಗೊಳ್ಳುತ್ತದೆ. ಇದೊಂದು ಸ್ವಾಭಾವಿಕ ಪ್ರಕ್ರಿಯೆಯಾಗಬೇಕೆ ಹೊರತು ಯಾವುದೇ ಒಂದು ಭಾಷೆಯನ್ನು ಇನ್ನಿತರರ ಮೇಲೆ ಹೇರಕೂಡದು. ಹಿಂದಿಯೇತರ ಜನರು ಹಿಂದಿ ಕಲಿಯುವಂತೆ ಪ್ರೋತ್ಸಾಹ ನೀಡುವುದನ್ನು ನಮ್ಮ ಪಕ್ಷವು ಬೆಂಬಲಿಸಿದರೂ ಎಲ್ಲ ಭಾರತೀಯ ಭಾಷೆಗಳನ್ನು ಸಮಾನವಾಗಿ ಪರಿಗಣಿಸಬೇಕೆಂದು ಆಗ್ರಹ ಪಡಿಸುತ್ತದೆ. ಆಡಳಿತ, ನ್ಯಾಯಾಂಗ ಮುಂತಾದ ಕಡೆ ಇಂಗ್ಲೀಷ್ ಬಳಸುವುದನ್ನು ನಿಲ್ಲಿಸಿ ಸಂಬಂಧಪಟ್ಟ ರಾಜ್ಯಗಳ ಭಾಷೆಯನ್ನು ಬಳಸಬೇಕು. ಎಲ್ಲ ಜನತೆಯೂ ತಮ್ಮ ಮಾತೃ ಭಾಷೆಯಲ್ಲಿ ವಿದ್ಯಾಭ್ಯಾಸ ಪಡೆಯಲು ಅನುವು ಮಾಡಿಕೊಡಬೇಕು. ಉರ್ದು ಭಾಷೆ ಮತ್ತು ಅದರ ಲಿಪಿಯನ್ನು ರಕ್ಷಿಸಬೇಕು. ನೇಪಾಲಿ ಮುಂತಾದ ಭಾಷೆಗಳನ್ನೊಳಗೊಳ್ಳುವಂತೆ ಸಂವಿಧಾನದ ಎಂಟನೇ ಪರಿಚ್ಛೇದವನ್ನು ತಿದ್ದುಪಡಿ ಮಾಡಬೇಕು.

ಪ್ರಸಕ್ತ ಚುನಾವಣೆಯ ಪದ್ಧತಿಯು ಅಲ್ಪ ಮತದೊಂದಿಗೆ ಸಂಸತ್ತು ಮತ್ತು ವಿಧಾನ ಸಭೆಗಳಲ್ಲಿ ಬಹುಮತದ ಸ್ಥಾನಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ. ತುರ್ತು ಪರಿಸ್ಥಿತಿಯ ಕಾಲದಲ್ಲಿ ಅಲ್ಪ ಮತದ ಕಾಂಗ್ರೆಸ್ ಸರ್ಕಾರ "ಸಂಸತ್ತು ಸರ್ವೋಚ್ಚ" ಎನ್ನುವ ಹೆಸರಿನಲ್ಲಿ ನಡೆಸಿದ ಅನಾಹುತವನ್ನು ನೆನೆಯಬಹುದು.

ಆದ್ದರಿಂದ ಯಾವ ಯಾವ ಪಕ್ಷ ಎಷ್ಟು ಮತಗಳನ್ನು ಪಡೆಯುತ್ತದೆಯೊ ಅದಕ್ಕೆ ಅನುಗುಣವಾದ ಪ್ರಾತಿನಿಧ್ಯ ದೊರಕುವ ಮತ್ತು ಚುನಾಯಿತ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಯುವ ವ್ಯವಸ್ಥೆಯನ್ನು ತರಬೇಕಾಗಿದೆ.

ಕಾಶ್ಮೀರ ರಾಜ್ಯಕ್ಕೆ ಪ್ರಸ್ತುತದಲ್ಲಿರುವ ವಿಶೇಷ ಸ್ಥಾನಮಾನಗಳನ್ನು ಉಳಿಸಿಕೊಳ್ಳಬೇಕಾಗಿದೆ. ★

ಎಸ್. ಎಫ್. ಐ. ನ ಇನ್ನೊಂದು ವಿಜಯ

ಕೋಝಿಕೋಡ್ ವಿಶ್ವವಿದ್ಯಾನಿಲಯದ ಚುನಾವಣೆಗಳಲ್ಲಿ ಎಸ್. ಎಫ್. ಐ. ನೇತೃತ್ವದ ಪ್ರಗತಿಶೀಲ ಸಂಯುಕ್ತ ರಂಗ ಭಾರೀ ವಿಜಯಗಳಿಸಿದೆ. ಕೆಲವು ದಿನಗಳ ಹಿಂದೆಯಷ್ಟೇ ಕೇರಳ ವಿಶ್ವವಿದ್ಯಾಲಯದ ಚುನಾವಣೆಗಳಲ್ಲಿ ಎಸ್.ಎಫ್.ಐ. ಭಾರೀ ಬಹುಮತ ಗಳಿಸಿತ್ತು. ಕೆ. ಎಸ್. ಯು. (ಐ) ಮತ್ತು ಆರ್.ಎಸ್.ಎಸ್. ನ ಹತೋಟಿಯಲ್ಲಿರುವ ಎ. ಬಿ. ವಿ. ಪಿ. ಮೈತ್ರಿಕೂಟ ಭಾರೀ ಸೋಲನ್ನುಂಡಿದೆ. ಕಾಂಗ್ರೆಸ್ (ಐ) ನ ಕೋಮುವಾದೀ-ವಿರೋಧದ ಮುಖವಾಡ ಇಲ್ಲೂ ಕಳಚಿ ಬಿದ್ದಿದೆ. ಕೋಝಿಕೋಡ್ ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಸಂಘಕ್ಕೆ ಇದು ಎಸ್.ಎಫ್.ಐ. ನ ಆರನೇ ವಿಜಯ ಎಂಬುದು ಗಮನಾರ್ಹ.

ಐಕ್ಯರಂಗ ಓದಿ
ನಿಮ್ಮ ಸ್ನೇಹಿತರನ್ನೂ
ಓದಿಸಿ

ಅಂತರ್‌ರಾಷ್ಟ್ರೀಯ

ಕ್ಯೂಬನ್ ಕಾರ್ಮಿಕ ಸಂಘಗಳ ಹದಿನೈದನೇ ಅಧಿವೇಶನ

2 024, ಫೆಬ್ರವರಿ 1984 ರಂದು ಹವಾನದಲ್ಲಿ ಕ್ಯೂಬನ್ ಕಾರ್ಮಿಕ ಸಂಘಗಳ ಕೇಂದ್ರೀಯ ಸಂಘಟನೆಯ ಹೈದಿನೈದನೇ ಅಧಿವೇಶನ ನಡೆಯಿತು. ಇದೇ ಸಮಯದಲ್ಲಿ ಕ್ಯೂಬಾ ತನ್ನ ಕ್ರಾಂತಿಯ 25ನೇ ವರ್ಷವನ್ನು ಆಚರಿಸುತ್ತಿದ್ದು ಅದಮ್ಯ ಉತ್ಸಾಹ ಎಲ್ಲೆಲ್ಲೂ ಕಂಡು ಬರುತ್ತಿತ್ತು. "ಉತ್ಪಾದನೆ ಮತ್ತು ರಕ್ಷಣೆಗಾಗಿ ಅಧಿವೇಶನ" ಎನ್ನುವುದು ಮೂಲ ಘೋಷಣೆಯಾಗಿತ್ತು. ಅಧಿವೇಶನದಲ್ಲಿ ವಿದೇಶಗಳಿಂದ ಬಹುಸಂಖ್ಯೆಯ ಸೌಹಾರ್ದ ಪ್ರತಿನಿಧಿಗಳು ಭಾಗವಹಿಸಿದ್ದು ಸಿಐಟಿಯು ಅನ್ನು ಕಾ. ನೃಸಿಂಗ ಚಕ್ರವರ್ತಿ ಪ್ರತಿನಿಧಿಸಿದ್ದರು.

1978 ರಲ್ಲಿ 14 ನೇ ಅಧಿವೇಶನ ನಡೆದಿತ್ತು. ಕಳೆದ ಆರು ವರ್ಷಗಳಲ್ಲಿ ಕ್ಯೂಬನ್ ಕಾರ್ಮಿಕ ಸಂಘವು ಅಕ್ಷರತೆ ಮತ್ತು ಮುಖ್ಯವಾಗಿ ವಯಸ್ಕರ ಶಿಕ್ಷಣ, ಆರ್ಥಿಕ, ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ಕಂಡು ಹಿಡಿಯುವುದು, ಸೈದ್ಧಾಂತಿಕ ಮತ್ತು ರಾಜಕೀಯ ಶಿಕ್ಷಣದ ಮೂಲಕ ಸಮಾಜವಾದಿ ಹಿರಿಮೆಯನ್ನು ಮೈಗೂಡಿಸಿಕೊಳ್ಳುವುದು ಮುಂತಾದ ಕಾರ್ಯಕ್ರಮವು ಹಾಕಿಕೊಂಡಿತ್ತು. ಇದೇ ಅವಧಿಯಲ್ಲಿ ಎರಡು ದಶ ಲಕ್ಷ ಕಾರ್ಮಿಕರು ಭಾಗವಹಿಸಿದ 50,000 ಸಭೆಗಳನ್ನು ನಡೆಸಿ ತಮ್ಮ ಸಮಸ್ಯೆಗಳನ್ನು ಚರ್ಚಿಸಿದ್ದಾರೆ.

ಅದಮ್ಯ ಉತ್ಸಾಹ

ಅಧಿವೇಶನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಮೊದಲನೆ ದಿನದಿಂದಲೇ ತಮ್ಮ ಅತೀವ ಉತ್ಸಾಹವನ್ನು ಘೋಷಣೆ ಕರತಾಡನಗಳ ಮೂಲಕ ಸೂಚಿಸುತಿದ್ದರು. ಅಧಿವೇಶನದಲ್ಲಿನ ಅವರ ಸಕ್ರೀಯ ಭಾಗವಹಿಸುವಿಕೆ ಗಮನಾರ್ಹವಾಗಿತ್ತು. ಈ ಅಂಶವನ್ನು ಕುರಿತಂತೆ ಫಿಡಲ್ ಕ್ಯಾಸ್ಟ್ರೊ ತಮ್ಮ ಸಮಾರೋಪ ಭಾಷಣದಲ್ಲಿ ಒತ್ತಿ ಹೇಳಿದರು.

ಅಧಿವೇಶನದಲ್ಲಿ ಭಾಗವಹಿಸಿದ್ದ 2194 ಪ್ರತಿನಿಧಿಗಳಲ್ಲಿ 591 ಮಹಿಳಾ ಪ್ರತಿನಿಧಿಗಳಿದ್ದರು. 184 ಸೌಹಾರ್ದ ಪ್ರತಿನಿಧಿಗಳು 86 ದೇಶಗಳನ್ನು ಪ್ರತಿನಿಧಿಸಿದ್ದರು. ಅಧಿವೇಶನದ ಉದ್ಘಾಟನೆಯಲ್ಲಿ ಫಿಡೆಲ್ ಕ್ಯಾಸ್ಟ್ರೊ ಉಪಸ್ಥಿತರಿದ್ದರು.

ವರದಿಯ ಮಂಡನೆ

ರಾಬರ್ಟೊ ವಿಗಾ ಮೆನನ್‌ಡೆಜ್ ತಮ್ಮ 63 ಪುಟಗಳ ವರದಿಯನ್ನು ಮಂಡಿಸುತ್ತಾ ಉತ್ಪಾದನೆ, ಉಳಿತಾಯಗಳ ಅಂಕಿ ಸಂಖ್ಯೆ ನೀಡುತ್ತಾ ವೇತನ, ಬೋನಸ್ಸು, ಸಾಮಾಜಿಕ ಭದ್ರತೆ ಮುಂತಾದವುಗಳಲ್ಲಿನ ಹೆಚ್ಚಳವನ್ನು ವಿವರಿಸಿದರು. ಕ್ಯೂಬಾದಲ್ಲಿ ನೀಡುತ್ತಿರುವ ಸಮಾಜಿಕ ಭದ್ರತೆ ತೃತೀಯ ಜಗತ್ತಿನಲ್ಲೇ ಉತ್ತಮವಾಗಿರುವುದಲ್ಲದೆ ಹಲವಾರು ಮುಂದುವರಿದ ಬಂಡವಾಳ ಶಾಹಿ ದೇಶಗಳಿಗಿಂತ ಉತ್ತಮವಾಗಿದೆಯೆಂದರು.

ಮಹಿಳೆಯ ನಿವೃತ್ತಿ ವಯಸ್ಸು

ವರದಿಯ ಮೇಲೆ ಮಾತನಾಡುತ್ತ ಪ್ರತಿನಿಧಿಯೊಬ್ಬರು ಮಹಿಳೆಯ ನಿವೃತ್ತಿ ವಯಸ್ಸನ್ನು ಇಳಿಸಬೇಕೆಂದು ಸೂಚಿಸಿದರು. ಕ್ಯೂಬಾದ ಸರಾಸರಿ ಬದುಕುವ ಸಮಯ 60 ವರ್ಷದಿಂದ 74 ವರ್ಷಗಳಿಗೇರಿದ್ದು 50 ನೇ ವರ್ಷಕ್ಕೆ ಮಹಿಳೆಯರು ಉದ್ಯೋಗಕ್ಕೆ ಅನರ್ಹರಾಗುವುದಿಲ್ಲ ಮತ್ತು ಒಮ್ಮೆಗೆ ಈ ಕ್ರಮ ಕೈಗೊಂಡರೆ ದೇಶದ ಉತ್ಪಾದನೆ ತೀವ್ರ ಬಿಕ್ಕಟ್ಟಿಗೆ ಸಿಲುಕುತ್ತದೆಂಬ ಕಾರಣದೊಂದಿಗೆ ಈ ಸಲಹೆಯನ್ನು ತಿರಸ್ಕರಿಸಲಾಯಿತು.

ಹಲವಾರು ವಿಷಯಗಳನ್ನು ಕುರಿತಂತೆ ಮೂರು ದಿನಗಳ ಕಾಲ ಚರ್ಚೆ ನಡೆಯಿತು. ಒಂದು ಸಂಘದ ಪ್ರತಿನಿಧಿಯು ಮಾಡಿದ ಟೀಕೆಗೆ ಉತ್ತರ ನೀಡುವಂತೆ ಆ ಸಂಘದ ನಾಯಕರನ್ನು ವೇದಿಕೆ ಮೇಲೆ ಕರೆಯಲಾಗುತಿತ್ತು. ಮತ್ತು ಕೆಲವೊಮ್ಮೆ ಮೂರು ನಾಲ್ಕು ಸದಸ್ಯರು ನಿರ್ದಿಷ್ಟ ವಿಷಯ ಕುರಿತಂತೆ ಭಾಷಣ ಸ್ಪರ್ಧೆಯೋ ಎನ್ನುವಂತೆ ಒಬ್ಬರಿಗೊಬ್ಬರು ಉತ್ತರ ನೀಡುತಿದ್ದರು. ಇಡಿ ವರದಿಯನ್ನು ಅನುಮೋದಿಸುವ ಮುನ್ನ ಪ್ರತಿಯೊಂದು ವಿಷಯವನ್ನು ಪ್ರತ್ಯೇಕವಾಗಿ ಮತ ಹಾಕಲಾಯಿತು.

ವಿದೇಶಿ ಪ್ರತಿನಿಧಿಗಳು

ಎರಡನೆಯ ದಿನ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಪ್ರತಿನಿಧಿ ಅಧಿವೇಶನಕ್ಕೆ ಶುಭಾಷಯ ಕೋರಿದರು. ಅಂದೇ ರಾತ್ರಿ ಲ್ಯಾಟಿನ್ ಅಮೆರಿಕನ್ ಕಾರ್ಮಿಕರಿಗೆ ಬೆಂಬಲ ವ್ಯಕ್ತಪಡಿಸುವ ಪ್ರತ್ಯೇಕ ಸಭೆಯನು ನಡೆಸಲಾಯಿತು.

ಕೊನೆಯ ದಿನ ಕೆಲವು ವಿದೇಶಿ ಪ್ರತಿನಿಧಿಗಳನ್ನು ಅನೇಕ ಕೆಲಸ ನಡೆಯುವ ಸ್ಥಳಗಳಿಗೆ ಕರೆದುಕೊಂಡು ಹೋಗಿ ಕೆಲಸಗಾರರನ್ನು ಉದ್ದೇಶಿಸಿ ಮಾತನಾಡುವಂತೆ ಕೇಳಲಾಯಿತು. ಸಮ್ಮೇಳನದ ಕೊನೆಯಲ್ಲಿ ಫಿಡೆಲ್ ಕ್ಯಾಸ್ಟ್ರೊ ಮಾತನಾಡಿ ಸಮ್ಮೇಳನದ ಯಶಸ್ಸಿಗೆ ದುಡಿದ ಎಲ್ಲರನ್ನೂ ವಂದಿಸುತ್ತಾ ಸಮ್ಮೇಳನವನ್ನು ಮುಗಿಸಲಾಯಿತು.

ಆಂಧ್ರ ಪ್ರದೇಶ

ಕಾಂಗ್ರೆಸ್ (ಐ) ಕುತಂತ್ರದ ಆಟಕ್ಕೆ ಇನ್ನೊಂದು ಕ್ರೀಡಾಂಗಣ

ಪಶ್ಚಿಮ ಬಂಗಾಳದ ಎಡರಂಗ ಸರಕಾರ, ಜಮ್ಮು-ಕಾಶ್ಮೀರದ ನ್ಯಾಶನಲ್ ಕಾನ್ಫರೆನ್ಸ್ ಸರಕಾರ ಮತ್ತು ನಮ್ಮ ರಾಜ್ಯದ ಹೆಗ್ಡೆ ಸರಕಾರದ ವಿರುದ್ಧ ಶ್ರೀಮತಿ ಗಾಂಧಿಯವರ ಪಕ್ಷ ನಡೆಸಲು ಪ್ರಯತ್ನಿಸಿದ ಕುತಂತ್ರದ ಆಟವನ್ನು ಆಳಿಯ ಆಂಧ್ರ ಹಿಂಬಾಲಕರು ತಮ್ಮ ರಾಜ್ಯದಲ್ಲಿ ಪುನರಾವರ್ತನೆಗೊಳಿಸಲು ಪ್ರಯತ್ನಿಸುತ್ತಿದ್ದಾರೆ.

ಆಂಧ್ರ ಪ್ರದೇಶದ ವಿಧಾನಸಭೆ ಈಗಾಗಲೇ ಬಹಳ ದಿನಗಳ ಹಿಂದೆ ವಿಧಾನ ಪರಿಷತ್ತನ್ನು ರದ್ದುಗೊಳಿಸುವ ನಿರ್ಣಯವನ್ನು ಅಂಗೀಕರಿಸಿದೆ. ಆಂಧ್ರದ ಚುನಾಯಿತ ವಿಧಾನಸಭೆ ಹಾಗೂ ಅದರ ಸರಕಾರದ ಈ ನಿರ್ಣಯವನ್ನು ಉದ್ದೇಶಪೂರ್ವಕವಾಗಿ ಕೇಂದ್ರದ ಕಾಂಗ್ರೆಸ್ ಸರಕಾರ ನಿರಾಕರಿಸುತ್ತಿರುವುದರಿಂದಷ್ಟೆ ಆ ವಿಧಾನ ಪರಿಷತ್ತು ಅಸ್ತಿತ್ವದಲ್ಲಿದೆ. ಇಂತಹ ವಿಧಾನ ಪರಿಷತ್ತಿನ ಬಗ್ಗೆ ತೆಲುಗು ದಿನ ಪತ್ರಿಕೆ "ಈನಾಡು" ವಿನ ಸಂಪಾದಕ ರಾಮೋಜಿರಾವ್ "ಪೆದ್ದಲು ಗಲಭೆ" (ಹಿರಿಯರ ಗಲಭೆ) ಎಂದು ಹೇಳಿದರೆಂಬ ಕಾರಣಕ್ಕಾಗಿ ಅವರು ಸಭಾ ಮರ್ಯಾದೆಯ ಉಲ್ಲಂಘನೆ ನಡೆಸಿದ್ದಾರೆಂದು ಆರೋಪಿಸಿ ಅದಕ್ಕಾಗಿ ಅವರನ್ನು ಕರೆದು ಛೀಮಾರಿ ಹಾಕಬೇಕೆಂದು ಈ ವಿಧಾನ ಪರಿಷತ್ತಿನ ನಿರ್ಣಯ. 14 ತಿಂಗಳ ಹಿಂದೆ ತೆಲುಗು ದೇಶಂ ಪಕ್ಷದ ಕೈಯಲ್ಲಿ ಪ್ರಚಂಡ ಸೋಲನ್ನುಂಡ ಆಂಧ್ರ ಪ್ರದೇಶದ ಕಾಂಗ್ರೆಸ್ಸಿಗರು ಆಂಧ್ರ ಮುಖ್ಯಮಂತ್ರಿ ಬೆಂಬಲಿಗರಾದ "ಈನಾಡು" ವಿನ ಸಂಪಾದಕರಿಗೆ ಛೀಮಾರಿ ಹಾಕಲು ನಡೆಸಿದ ಪ್ರಯತ್ನವಿದು. ಇದನ್ನು ಸಾಧಿಸುವಲ್ಲಿ ರಾಮೋಜಿರಾವ್ ಸಭಾ ಮರ್ಯಾದೆಯ ಉಲ್ಲಂಘನೆ ಮಾಡಿರಲಿಕ್ಕಿಲ್ಲ ಎಂಬ ಸುಪ್ರೀಂ ಕೋರ್ಟಿನ ಅಭಿಪ್ರಾಯವನ್ನೂ ಧಿಕ್ಕರಿಸಲು ಅವರು ಹಿಂಜರಿಯಲಿಲ್ಲ. ಸದ್ಯ ಆಂಧ್ರ ಸರಕಾರದ ಸಲಹೆಯ ಮೇರೆಗೆ ರಾಜ್ಯಪಾಲರು ವಿಧಾನ ಪರಿಷತ್ತಿನ ಅಧಿವೇಶನವನ್ನು ಮುಂದೂಡಿರುವುದರಿಂದ ಈ ಪ್ರಯತ್ನಕ್ಕೆ ತಾತ್ಕಾಲಿಕ ತಡೆ ಬಿದ್ದಂತಾಗಿದೆ.

(5ನೇ ಪುಟದಿಂದ)

ಇವೆರಡು ಪ್ರಸ್ತುತ ತಿದ್ದುಪಡಿಯ ಎರಡು ಮುಖ್ಯ ಅಂಶಗಳು.

ಸ್ವಾಭಾವಿಕವಾಗಿಯೇ ರಾಜ್ಯದ ಎಲ್ಲಾ ಪ್ರತಿಕ್ರಿಯಾವಾದಿ ಶಕ್ತಿಗಳ ಪ್ರತಿನಿಧಿಯಾದ ಕಾಂಗ್ರೆಸ್ ವಿಧಾನ ಸಭೆಯೊಳಗೆ ಇದರ ವಿರುದ್ಧ ಬೊಬ್ಬೆ ಹಾಕುತ್ತಿದ್ದರೆ ಹೊರಗಡೆ ಕೆಲವು "ಬುದ್ಧಿ ಜೀವಿ"ಗಳು ವಿಶ್ವವಿದ್ಯಾಲಯದ ಆಡಳಿತದಲ್ಲಿ ಹಸ್ತಕ್ಷೇಪವಿದು ಎಂದು ಹಾಹಾಕಾರ ನಡೆಸುತ್ತಿದ್ದಾರೆ. ಇವರೆಲ್ಲಾ ತುರ್ತು ಪರಿಸ್ಥಿತಿಯ ಕಾಲದಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಆಗಿನ ಯುವರಾಜನಿಗೆ ಸನ್ಮಾನ ಮಾಡಿದ ಪ್ರಭೃತಿಗಳು ಎಂಬುದನ್ನು ಗಮನಿಸಿದರೆ ಇವರ ಹಾಹಾಕಾರದ ತಿರುಳು ಸ್ಪಷ್ಟವಾಗುತ್ತದೆ. ಎಂದಿನಂತೆ ದೊಡ್ಡ ಪತ್ರಿಕೆಗಳು ಈ ಬೊಬ್ಬೆಗೆ ಬೆಂಬಲ ನೀಡುತ್ತಿವೆ. ಬಹುಶಃ ಹೊಸ ವಿಧೇಯಕದ ಸಾಮಾಜಿಕ ಮಹತ್ವ ಎಷ್ಟೆನ್ನುವುದಕ್ಕೆ ಇವೆಲ್ಲಾ ಉತ್ತಮ ಸಾಕ್ಷಿಗಳು.

ಮಂಗಳೂರು

ಡಿ. ವೈ. ಎಫ್. ಐ. ತಾಲ್ಲೂಕು ಸಮಿತಿ ರಚನೆ

25-3-84 ರಂದು ಡಾನ್ ಬೊಸ್ಕೊ ಮಿನಿ ಹಾಲ್‌ನಲ್ಲಿ ಡಿ. ವೈ. ಎಫ್. ಐ. ನೇತೃತ್ವದಲ್ಲಿ ನಡೆದ ಮಂಗಳೂರು ತಾಲ್ಲೂಕು ಮಟ್ಟದ ಯುವಕರ ವಿಸ್ತೃತ ಸಭೆಯು ಡಿ. ವೈ. ಎಫ್. ಐ. ಜಿಲ್ಲಾ ಸಮಿತಿ ಮಾಜಿ ಅಧ್ಯಕ್ಷ ಶಿವಾನಂದ ಕೋಡಿ ಯವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಬಂದ ಬಿ. ಮಾಧವರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಯುವಕರು ಸಮಾಜದ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಬೇಕೆಂದು ಹೇಳಿದರು.

ದೇಶದಲ್ಲಿ ಇಂದಿನ ಯುವ ಶಕ್ತಿಯನ್ನು ತಪ್ಪುದಾರಿಗೆ ಎಳೆಯುವಂತಹ ಪ್ರತಿಗಾಮಿ ಚಿಂತನೆ ವಿರುದ್ಧ ಡಿ. ವೈ. ಎಫ್. ಐ. ಸದಸ್ಯರು ಯುವಕರಲ್ಲಿ ಪುರೋಗಾಮಿ ಚಿಂತನೆ ಬೆಳೆಸುವುದು ಇಂದಿನ ಪರಿಸ್ಥಿತಿಯಲ್ಲಿ ಅಗತ್ಯ ಎಂದು ಕೆ. ಆರ್. ಶ್ರೀಯಾನ್ ಸಭೆಯನ್ನು ಉದ್ದೇಶಿಸಿ ಹೇಳಿದರು. ಬಳಿಕ ಡಿ. ವೈ. ಎಫ್. ಐ. ಮಂಗಳೂರು ತಾಲ್ಲೂಕಿನ ನೂತನ ಸಂಘಟನಾ ಸಮಿತಿಯನ್ನು ಸರ್ವಾನುಮತದಿಂದ ರಚಿಸಲಾಯಿತು ಅಧ್ಯಕ್ಷ-ಸದಾಶಿವ ಶೆಟ್ಟಿ ಕಾರ್ಪೊರೇಟರ್ (ಜಪ್ಪಿನಮೊಗರು) ಉಪಾಧ್ಯಕ್ಷ ಕೃಷ್ಣಪ್ಪ ಟೈಲರ್, ಕಾರ್ಯದರ್ಶಿ ಶಿವಾನಂದ ಕೋಡಿ, ಜೊತೆ ಕಾರ್ಯದರ್ಶಿ ಜಯಂತ ಕುಮಾರ್, ಕೋಶಾಧಿಕಾರಿ ಸದಾನಂದ ಹಾಗೂ 15 ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಯಿತು. ಜಪ್ಪಿನ ಮೊಗ್ರು ಪ್ರದೇಶದ ಕಾರ್ಪೊರೇಟರು ಹಾಗೂ ನೂತನ ಸಮಿತಿಯ ಅಧ್ಯಕ್ಷರಾದ ಸದಾಶಿವ ಶೆಟ್ಟಿ ಯವರು ಡಿ. ವೈ. ಎಫ್. ಐ. ಸದಸ್ಯರು ಪ್ರದೇಶದ ಯುವಕರ ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿದರೆ ಡಿ. ವೈ. ಎಫ್. ಐ. ನೇತೃತ್ವದಲ್ಲಿ ಮಂಗಳೂರು ತಾಲ್ಲೂಕಿನಲ್ಲಿ ಯುವಕರ ಬಲಿಷ್ಟ ಚಳವಳಿಯನ್ನು ಕಟ್ಟಬಹುದೆಂದು ಅಭಿಪ್ರಾಯಪಟ್ಟರು. ಸಭೆಯ ಪ್ರಾರಂಭದಲ್ಲಿ ಸುನಿಲ್ ನಟೇಕರ್ ಸ್ವಾಗತಿಸಿದರು. ಕೊನೆಗೆ ಸಂಘಟನಾ ಸಮಿತಿಯ ಸಹ ಕಾರ್ಯದರ್ಶಿ ವಂದನಾರ್ಪಣೆ ಮಾಡಿದರು.

ಬಂಟ್ವಾಳದಲ್ಲಿ ಒಕ್ಕಲೆಬ್ಬಿಸುವುದನ್ನು ಕೂಡಲೇ ನಿಲ್ಲಿಸಿರಿ

ಹತ್ತಾರು ವರ್ಷಗಳಿಂದ ಬಡ ಕೃಷಿ ಕಾರ್ಮಿಕರು ಇತರ ದುರ್ಬಲ ವರ್ಗದ ಜನರು ಸರಕಾರಿ ಸ್ಥಳದಲ್ಲಿ ಮನೆ ಕಟ್ಟಿ ವಾಸ ಮಾಡುತ್ತಾ ಬಂದಿದ್ದಾರೆ. ಅವರು ಹಲವು ಬಾರಿ ಗೃಹ ನಿವೇಶನಕ್ಕೆ ಅರ್ಜಿ ಕೊಟ್ಟರೂ ರೆವಿನ್ಯೂ ಅಧಿಕಾರಿಗಳಿಗೆ ಲಂಚ ಕೊಟ್ಟರೂ ನೂರಾರು ಮಂದಿ ಬಡವರಿಗೆ ಈ ತನಕ ನಿವೇಶನದ ಹಕ್ಕುಪತ್ರ ಸಿಕ್ಕಿದಿಲ್ಲ.

ಬದಲಾಗಿ ಇದೀಗ ಬಂಟ್ವಾಳ ತಾಲ್ಲೂಕು ತಹಶೀಲ್ದಾರರಿಂದ ಸಹ ಕಾರೀ ಸ್ಥಳವನ್ನು ಅಕ್ರಮ ಮಾಡಿದ್ದೀರಿ, 7 ದಿನಗಳೊಳಗೆ ಬಿಟ್ಟು ಹೋಗಬೇಕು, ಇಲ್ಲದಿದ್ದರೆ ಮುಟ್ಟುಗೋಲು ಹಾಕಲಾಗುತ್ತದೆಂಬ ಎಚ್ಚರಿಕೆಯ ನೋಟೀಸು ಬಂದಿದೆ. ಬಂಟ್ವಾಳ ತಾಲ್ಲೂಕು ರೈತ ಸಂಘ ಈ ವರ್ಗದ ಜನರನ್ನು ಇದೀಗ ಸಂಘಟಿಸಿದೆ. ಜನತಾ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಕರ್ನಾಟಕ ಪ್ರಾಂತ ರೈತ ಸಂಘ (ಅಖಿಲ ಭಾರತ ಕಿಸಾನ್ ಸಭಾದ ಅಂಗ) ಹಲವು ಬಾರಿ ಮುಖ್ಯ ಮಂತ್ರಿಗಳನ್ನು ಕಂಡು ಸರಕಾರಿ ಸ್ಥಳದಲ್ಲಿ ವಾಸ್ತವ್ಯ ಇರುವ ಬಡವರಿಗೆ ಹಕ್ಕುಪತ್ರ ಕೊಡಬೇಕೆಂದು ಒತ್ತಾಯಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಡ ದರ್ಖಾಸ್ತುದಾರರಿಂದ ಹಲವು ಮನವಿಗಳನ್ನು ಸಲ್ಲಿಸಿದೆ. ಮೆರವಣಿಗೆ, ಪ್ರದರ್ಶನ, ಸತ್ಯಾಗ್ರಹ ಮೊದಲಾದ ಚಳವಳಿಗಳನ್ನು ಮಾಡಿ ಬಡವರಿಂದ ಆದ ಸರಕಾರಿ ಸ್ಥಳದ ಅಕ್ರಮ ಸಕ್ರಮಗೊಳಿಸಬೇಕೆಂದೂ ಒತ್ತಾಯಿಸಿದೆ.

ಇದೀಗ ಸರಕಾರೀ ಅಧಿಕಾರಿಗಳ ಒಕ್ಕಲೆಬ್ಬಿಸುವ ನೀತಿಯು ಈ ದುರ್ಬಲ ವರ್ಗದ ಜನರನ್ನು ಬೀದಿಪಾಲು ಮಾಡುವ ಸಂಚಿಕೆಯಾಗಿದೆ. ಸೂಕ್ತ ರಕ್ಷಣೆ ನೀಡಬೇಕೆಂದೂ, ದುಡಿಯುವ ವರ್ಗದ ಜನರಿಗೆ ಯಾವುದೇ ರೀತಿಯ ದಂಡನೆ ವಿಧಿಸದೆ ಡಿ ನೋಟೀಸು ಕೊಡಬೇಕೆಂದೂ ಕರ್ನಾಟಕ ಮುಖ್ಯಮಂತ್ರಿಗಳಿಗೆ ಬಂಟ್ವಾಳ ತಾಲ್ಲೂಕು ರೈತ ಕಾರ್ಮಿಕರ ನಾಯಕರಾದ ಬಿ. ವಾಸುಗಟ್ಟೆ ಒತ್ತಾಯಿಸಿದ್ದಾರೆ.

ವೀರಾಜಪೇಟೆಯಲ್ಲಿ ಒಂದು ತುರ್ಕ್‌ಮೆನ್‌ಗೇಟ್ ಪ್ರಕರಣ

ದಿನಾಂಕ 7-4-84 ರಂದು ಶನಿವಾರ ವೀರಾಜಪೇಟೆ ನಗರದ ಬಸ್ ನಿಲ್ದಾಣದ ಹಲವು ಮಳಿಗೆಗಳನ್ನು ವೀರಾಜಪೇಟೆ ಪುರಸಭಾ ಅಧಿಕಾರಿ ಮತ್ತು ಅಧ್ಯಕ್ಷರು ಏಕಾ ಏಕಿ ಕೆಡವಿ ಹಾಕಿಸಲು ತೊಡಗಿದರು. ಹಲವಾರು ವರ್ಷಗಳಿಂದ ಬಾಡಿಗೆದಾರರಾಗಿ ಬಾಡಿಗೆ ಪಾವತಿಸುತ್ತಿದ್ದ ಬಡಪಾಯಿಗಳು ಇದರಿಂದ ಕಂಗಾಲಾಗಿ ತತ್ತರಿಸಿ ಹೋದರು.

ಇದು ಎಮರ್ಜೆನ್ಸಿಯಲ್ಲಿ, ಕಾಂಗ್ರೆಸ್ ದೆಹಲಿಯ ತುರ್ಕ್‌ಮೆನ್ ಗೇಟ್‌ನಲ್ಲಿ ನಡೆಸಿದ ಕರಾಳ ಕೃತ್ಯವನ್ನು ನೆನಪಿಗೆ ತರುತ್ತದೆ.

ವೀರಾಜಪೇಟೆ ಕಾಂಗ್ರೆಸ್ ಪಕ್ಷದ ಮುನ್ಸಿಪಲ್ ಅಧ್ಯಕ್ಷರು ನಡೆಸಿದ ಈ ಕ್ರಮ ಕಾನೂನು ಬಾಹಿರವಾದದ್ದು, ವೀರಾಜಪೇಟೆ ಮುನ್ಸಿಫ್ ಕೋರ್ಟು ಬಾಡಿಗೆದಾರರ ವಸ್ತುಗಳನ್ನು ವಾಪಾಸು ಕೊಡಲು ಮತ್ತು ಮುಂದಿನಂತೆಯೇ ಮುಂದುವರಿಸಿಕೊಂಡು ಹೋಗಲು ಆಜ್ಞೆ ಮಾಡಿದೆ.

ಭಾ.ಜ.ಪ.ದ ಜನದ್ರೋಹಿ ನೀತಿ

ಅಖಿಲ ಭಾರತದ ಮಟ್ಟದಲ್ಲಿ ಕಾಂಗ್ರೆಸ್‌ಗೆ ತಾನೇ ಪರ್ಯಾಯ ಎಂದು ಭಾ. ಜ. ಪ. ಘೋಷಿಸುತ್ತಿದೆ. ಆದರೆ ವೀರಾಜಪೇಟೆ ಪುರಸಭೆಯಲ್ಲಿ ಕಾಂಗ್ರೆಸ್ಸನ್ನು ಬೆಂಬಲಿಸಿದ ಭಾರತೀಯ ಜನತಾಪಕ್ಷದ ಈ ಸಂದರ್ಭಸಾಧಕತನ ಇಷ್ಟಕ್ಕೆ ನಿಲ್ಲಲಿಲ್ಲ. ಕಾಂಗ್ರೆಸ್ ಆಳ್ವಿಕೆ ಬಡವರನ್ನು ಬೀದಿಪಾಲು ಮಾಡುವುದನ್ನು ಭಾ. ಜ. ಪ.ದ ಪುರಸಭಾ ಸದಸ್ಯ ಬೆಂಬಲಿಸಿದ್ದು ಮಾತ್ರವಲ್ಲ ಸ್ವತಃ ಹಾಜರಾಗಿ ಕುಮ್ಮಕ್ಕೂ ನೀಡಿದ್ದಾರೆ. ಇದು ಭಾಜಪದ ಅತ್ಯಂತ ನಾಚಿಕೆಗೇಡಿನ ಜನದ್ರೋಹಿ ವರ್ತನೆ. ಬಡಜನತೆ ಸಂಕಷ್ಟದಲ್ಲಿರುವಾಗ ಅವರಿಗೆ ಸಹಾಯ ಮಾಡದಿರುವ ಭಾಜಪದಂತಹ ಪಕ್ಷದ ಬಗ್ಗೆ ಜನತೆ ಎಚ್ಚರದಿಂದಿರಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮನವಿ ಮಾಡುತ್ತದೆ.

ಜನತಾ ಪಕ್ಷದ ನಿಲುವು

ರಾಜ್ಯ ಸರಕಾರವನ್ನು ಆಳುತ್ತಿರುವ ಜನತಾ ಪಕ್ಷಕ್ಕೆ ವೀರಾಜಪೇಟೆ ಪುರಸಭೆಯಲ್ಲಿ ಎರಡು ಸದಸ್ಯರಿದ್ದಾರೆ. ಆದರೆ ಇವರಿಬ್ಬರೂ ಬಡ ಬಾಡಿಗೆದಾರರನ್ನು ಬೀದಿ ಪಾಲು ಮಾಡುವಾಗ ಮೌನವಾಗಿದದ್ದು ಆಶ್ಚರ್ಯಕರ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬೆಂಬಲದಿಂದ ಜನಸಾಮಾನ್ಯರ ಓಟು ಗಿಟ್ಟಿಸಿ ಗೆದ್ದು ಬಂದ ಜನತಾ ಸದಸ್ಯರು ಬಡವರ ಮೇಲಾಗುತ್ತಿರುವ ಈ ಅನ್ಯಾಯವನ್ನು ಪ್ರತಿಭಟಿಸದಿರುವುದು ಆತಂಕಕಾರಿಯಾಗಿದೆ. ಕಾಂಗ್ರೆಸ್ ಸರ್ವಾಧಿಕಾರವನ್ನು ವಿರೋಧಿಸಿ ನಡೆಯುವ ಹೋರಾಟದಲ್ಲಿ ಮಹತ್ತರ ಪಾತ್ರ ವಹಿಸಬೇಕಾದ ಜನತಾಪಕ್ಷ ಈಗ ನಿಷ್ಕ್ರಿಯವಾಗಿರುವುದು ಸರಿಯಲ್ಲ.

ಪುರಸಭೆಯಲ್ಲಿ ಪ್ರಾತಿನಿಧ್ಯವಿರುವ ಕನ್ನಡ ನಾಡು ಮತ್ತು ಮುಸ್ಲಿಮ್ ಲೀಗ್ ಪಕ್ಷಗಳೂ ಕೂಡ ಕಾಂಗ್ರೆಸ್ ಪಕ್ಷದ ಈ ಜನವಿರೋಧಿ ನೀತಿಯನ್ನು ಪ್ರತಿಭಟಿಸಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ವಿನಂತಿಸುತ್ತದೆ.

ಬಡ ಬಾಡಿಗೆದಾರರನ್ನು ಕಾನೂನು ಬಾಹಿರವಾಗಿ ಏಕಾ ಏಕಿ ಹೊರಹಾಕಿ ಅವರ ಸಾಮಾನುಗಳನ್ನು ಕೊಂಡೊಯ್ದ ಕಾಂಗ್ರೆಸ್ ಪುರಸಭಾ ಆಳ್ವಿಕೆಯ ಸರ್ವಾಧಿಕಾರಿ ಕ್ರಮವನ್ನು ಉಗ್ರವಾಗಿ ಖಂಡಿಸುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಎಲ್ಲಾ ಪ್ರಜಾಪ್ರಭುತ್ವವಾದಿ ಜನತೆ ಇದನ್ನು ಪ್ರತಿಭಟಿಸಿ ಆಂದೋಲನ ನಡೆಸಬೇಕೆಂದು ಮನವಿ ಮಾಡಿಕೊಳ್ಳುತ್ತದೆ.

ಪುತ್ತೂರಿನಲ್ಲಿ ಸಂಘಟನಾ ಜಾತಾ

ಬೀಡಿ ಮೊದಲಾದ ಉದ್ಯಮಗಳಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಸಂಘಟಿಸುವ ಸಲುವಾಗಿ ಏಪ್ರಿಲ್ 20 ರಿಂದ 23 ರವರೆಗೆ ಸಂಘಟನಾ ಜಾತಾವನ್ನು ಪುತ್ತೂರು ತಾಲ್ಲೂಕು ಕೆಲಸಗಾರರ ಸಂಘವು ಹಮ್ಮಿಕೊಂಡಿರುತ್ತದೆ. ಈ ಜಾತಾದ ನೇತೃತ್ವವನ್ನು ಯು. ಬಿ. ಲೋಕಯ್ಯ, ಬಿ. ರಾಮಕೃಷ್ಣ, ಪಿ. ಎಸ್. ಅಬ್ರಾಹಂ, ಚನಿಯಪ್ಪ ಗೌಡ ಮತ್ತು ಗಿರಿಜರವರು ವಹಿಸಲಿರುವರು. ಜಾಥಾದ ಸಮಯದಲ್ಲಿ ಸಿ. ಐ. ಟಿ. ಯು ವಿನ ನಾಲ್ಕನೇ ರಾಜ್ಯ ಸಮ್ಮೇಳನದ ಸಂದೇಶವನ್ನು ಮಧ್ಯೆ ಕೊಂಡೊಯ್ಯಲಾಗುವುದು.

(1ನೇ ಪುಟದಿಂದ)

ಕೊಳ್ಳದಿರುವುದರ ಬಗ್ಗೆ ಅಸಮಾಧಾನ ವ್ಯಕ್ತಮಾಡಿದರು. ಬಗರು ಹುಕುಂ ಸಾಗುವಳಿ, ಕೃಷಿ ಯೋಗ್ಯ ಫಾರೆಸ್ಟ್, ಸರ್ಕಾರಿ, ಸಿ ಮತ್ತು ಡಿ, ಪುರಸಭೆ ಪ್ರದೇಶಗಳಲ್ಲಿ ಈಗಾಗಲೇ ಕೃಷಿ ಮಾಡುತ್ತಿರುವ, ವಾಸವಾಗಿರುವ ಭೂಹೀನ ರೈತರಿಗೆ ಪಟ್ಟಾ ನೀಡದಿದ್ದರೆ ರಾಜ್ಯಾದ್ಯಂತ ಹೋರಾಟ ಮಾಡಬೇಕಾದೀತೆಂದೂ ಹೇಳಿದರು. ಈ ಹಿಂದೆ ನಡೆಸಿದ್ದ ಹೋರಾಟಗಳಿಗೆ ಸಂಬಂಧಿಸಿದ ಮೊಕದ್ದಮೆಗಳನ್ನೆಲ್ಲ ಹಿಂತೆಗೆದುಕೊಳ್ಳುವುದಾಗಿ ನೀಡಿದ್ದ ಆಶ್ವಾಸನೆ ಪೂರ್ಣಗೊಳ್ಳದಿರುವುದರ ಬಗ್ಗೆಯೂ ಸರಕಾರದ ಗಮನ ಸೆಳೆದರು.

ರೈತ ಸಂಘಗಳ ಪ್ರತಿನಿಧಿಗಳೊಡನೆ ಚರ್ಚೆಯಂತೂ ಆಯಿತು. ಇನ್ನು ಅದರ ಪ್ರತಿಫಲ ಏನಾಗುತ್ತದೆ ನೋಡಬೇಕು.

ತ. ರಾ. ಸು. ಇನ್ನಿಲ್ಲ

ಕನ್ನಡದ ಖ್ಯಾತ ಕಾದಂಬರಿ ಕಾರ, ಸಾಹಿತಿ ತ. ರಾ. ಸುಬ್ಬರಾಯರು ಏಪ್ರಿಲ್ 10 ರಂದು ಬೆಂಗಳೂರಿನಲ್ಲಿ ನಿಧನರಾದರು. ಕನ್ನಡ ಓದುಗರಿಗೆ ತ. ರಾ. ಸು. ಎಂದೇ ಸುಪರಿಚಿತರಾಗಿದ್ದ ಇವರು ಅನೇಕ ಉತ್ತಮ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿ ಅಗಲಿದ್ದಾರೆ. ಸಾಹಿತ್ಯಾಸಕ್ತ ಮನೆಯ ವಾತಾವರಣದಲ್ಲೇ ಬೆಳೆದ ತರಾಸು ಉತ್ತಮ ಸಾಹಿತಿಯಾಗಿ ಅನೇಕ ಉತ್ತಮ ಕೃತಿಗಳನ್ನು ಸೃಷ್ಟಿಸಿದ್ದಾರೆ. ಚರಿತ್ರೆಯನ್ನು ರಂಜಕವಾಗಿ ಬರೆದ ಅವರ ಐತಿಹಾಸಿಕ ಕಾದಂಬರಿಗಳು ಅಪಾರ ಜನಪ್ರಿಯತೆಯನ್ನು ಗಳಿಸಿಕೊಟ್ಟವು. ಇತ್ತೀಚೆಗಷ್ಟೇ ಪ್ರಕಟವಾದ ಅವರ ದುರ್ಗಾಸ್ತಮಾನ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಕೆಲ ಕಾಲ ಪತ್ರಿಕೋದ್ಯೋಗಿಯಾಗಿ ನಂತರ ತಮ್ಮ ಇಡೀ ಜೀವನವನ್ನು ಸಾಹಿತ್ಯ ಸೇವೆಗೆ ಮುಡಿಪಿಟ್ಟ ತ. ರಾ. ಸು ಅವರ ಅಗಲಿಕೆ ಕನ್ನಡ ಸಾಹಿತ್ಯಕ್ಕುಂಟಾದ ಮಹಾನ್ ನಷ್ಟ. ತ. ರಾ. ಸು. ಅವರ ನಿಧನಕ್ಕೆ ಐಕ್ಯರಂಗ ತನ್ನ ಸಂತಾಪ ವ್ಯಕ್ತ ಪಡಿಸುತ್ತದೆ.

ಪ್ಲಾಂಟೇಶನ್ ಕಾರ್ಮಿಕ ಸಂಘದ ಸಭೆ

ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ ಕಾರ್ಯಕಾರಿ ಸಮಿತಿ ಸಭೆಯು ಏ. 9 ರಂದು ಚಿಕ್ಕಮಗಳೂರಿನಲ್ಲಿ ಕಾ. ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮುಂದಿನ ಮೇ 14 ರಿಂದ 17 ರವರೆಗೆ ಮಂಗಳೂರಿನಲ್ಲಿ ನಡೆಯುವ ಕರ್ನಾಟಕ ರಾಜ್ಯ ಸಿ.ಐ.ಟಿ.ಯು. 4ನೇ ಸಮ್ಮೇಳನಕ್ಕೆ 7 ಮಂದಿ ಪ್ರತಿನಿಧಿಗಳನ್ನು ಚುನಾಯಿಸಿತು. ಮೇ 17 ರಂದು ಮಂಗಳೂರಿನಲ್ಲಿ ನಡೆಯುವ ಸಿಐಟಿಯು ಕೊನೆಯ ದಿನದ ಸಮ್ಮೇಳನದ ಮೆರವಣಿಗೆ ಮತ್ತು ಬಹಿರಂಗ ಸಭೆಯಲ್ಲಿ ಭಾಗವಹಿಸಲು ಒಂದು ಬಸ್ ಹೊರಡಿಸಲು ತೀರ್ಮಾನಿಸಲಾಯಿತು.

ಅಖಿಲ ಭಾರತ ಬಂದರು, ಕೇರಳದ ವಿದ್ಯುಚ್ಛಕ್ತಿ, ಚಿಕ್ಕಮಗಳೂರಿನ ಮೈಸೂರು ಕಾಫಿ ಕ್ಯೂರಿಂಗ್ ವರ್ಕ್ಸ್ ಚಳವಳಿಗೆ ಬೆಂಬಲ ಕೊಡುವ, ಕನಿಷ್ಟ ಕೂಲಿಯನ್ನು ಕೂಡಲೆ ಪ್ರಕಟಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯ ಪಡಿಸುವ ನಿರ್ಣಯಗಳನ್ನು ಅಂಗೀಕರಿಸಿತು.

(1ನೇ ಪುಟದಿಂದ)

ಹೀಗೆ ಕಾಂಗ್ರೆಸ್ ಮತ್ತು ಇತರ ಹಲವಾರು ಪಟ್ಟಭದ್ರ ಹಿತಾಸಕ್ತಿಗಳನ್ನೆದುರಿಸಿ ಜಿಲ್ಲಾ ಪರಿಷತ್ ಮಸೂದೆ ಪಾಸಾಗಿದೆ. ಇದೇ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಜಿಲ್ಲಾ ಪರಿಷತ್ತಿಗೆ ಚುನಾವಣೆ ನಡೆಸಿಯೇ ತೀರುತ್ತೇನೆಂದು ಅಬ್ದುಲ್ ನಜೀರ್‌ಸಾಬ್ ಹೇಳಿದ್ದಾರೆ.

ಈ ಮಸೂದೆಯ ಉಪಯೋಗ ಜನರಿಗಾಗಬೇಕಾದರೆ, ಗ್ರಾಮಾಂತರ ಪ್ರದೇಶದಲ್ಲಿ ಜನಜಾಗೃತಿಯನ್ನುಂಟು ಮಾಡಿ, ಮುಂಬರುವ ಚುನಾವಣೆಯಲ್ಲಿ ಸ್ವಹಿತ ಸಾಧಕರು, ಪಟ್ಟಭದ್ರ ಹಿತಾಸಕ್ತಿಗಳು ಚುನಾಯಿಸಿ ಬಾರದಂತೆ ನೋಡಿಕೊಳ್ಳುವುದು ಅತ್ಯಗತ್ಯ.

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K. V. Temple Street, Sultanpet. B-53. Phone : 24154
Editor : P. Ramachandra Rao
Managing Editor : N. K. Upadhyaya